# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 137 Issue: 137 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 29.11.2024 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2










**ಮೈಕ್ರೋ ನ್ಯೂಸ್**

## ಕನ್ನಡ ಫಿಲಂ ಚೇಂಬರ್ ಸಂಸ್ಥೆ ಜಿಲ್ಲಾಧ್ಯಕ್ಷರಾಗಿ ಸಿ ಹನುಮಂತಪ್ಪ ನೇಮಕ

**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಕಾನಾಹೊಸಹಳ್ಳಿ ಸಮೀಪದ ಹಿರೇಕುಂಬಳಗುಂಟೆ ಗ್ರಾಮವಾಸಿ ಹನುಮಂತಪ್ಪ. ಸಿ. ಇವರನ್ನು ಕನ್ನಡ ಫಿಲಂ ಚೇಂಬರ್ ಸಂಸ್ಥೆಯ (ರಿ ) ವಿಜಯನಗರ ಜಿಲ್ಲಾ ಅಧ್ಯಕ್ಷರಾಗಿ ನೇಮಕ ಗೊಂಡಿದ್ದಾರೆ.



ತಮಗೆ ವಹಿಸಿರುವ ಹೊಣೆಗಾರಿಕೆಯನ್ನು ನಿಷ್ಠೆಯಿಂದ ನಿರ್ವಹಿಸುತ್ತಾ ರಾಜ್ಯ ಸಮಿತಿಯ ಮಾರ್ಗದರ್ಶನದಲ್ಲಿ ನೀಡಲಾಗುವ ಎಲ್ಲಾ ಕಾರ್ಯಗಳನ್ನು ಯಾವುದೇ ಕಾರಣಕ್ಕೂ ಚಾಚು ತಪ್ಪದೇ ಸಮಸ್ಯೆ ಇಲ್ಲದಂತೆ ನಡೆಸಿಕೊಂಡು ಹೋಗಬೇಕು ಮತ್ತು ಯಾವುದೇ ಕಾನೂನು ಬಾಹಿರ ಚಟುವಟಿಕೆಗಳಿಗೆ ಆದೇಶ ಪತ್ರವನ್ನು ಬಳಸಬಾರದು ಕನ್ನಡ ಫಿಲಂ ಚೇಂಬರ್ ಸಂಸ್ಥೆಗೆ ಸಂಬಂಧ ಪಟ್ಟ ವಿಷಯಗಳಿಗೆ ಮಾತ್ರ ಆದೇಶ ಪತ್ರವನ್ನು ಬಳಸಬೇಕೆಂದು ಆದೇಶ ಪತ್ರ ದಲ್ಲಿ ಉಲ್ಲೇಖ ಮಾಡಿ. ರಾಜ್ಯ ಸಮಿತಿಯ ಫಿಲಂ ಚೇಂಬರ್ ಸಂಸ್ಥೆಯ ರಾಜ್ಯಾಧ್ಯಕ್ಷರಾದ ಎಂಎಸ್ ರವೀಂದ್ರ ಅವರು ಹನುಮಂತಪ್ಪ ಸಿ ಇವರನ್ನು ವಿಜಯನಗರ ಜಿಲ್ಲಾ ಫಿಲಂ ಚೇಂಬರ್ ಸಂಸ್ಥೆಯ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಪತ್ರ ನೀಡಿದ್ದಾರೆ.

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.

# ಜನರ ಮನಗೆದ್ದ ಜನಪದ ಹಾಡುಗಾರ್ತಿ ಏಣಿಗಿ ನೀಲಮ್ಮ

## ಅಜ್ಜಿಯ ಮಾತುಗಳನ್ನು ಅಕ್ಷರಕ್ಕಿಳಿಸಿದ ಮೊಮ್ಮಗಳು ರೇವತಿ | ಬರವಣಿಗೆಗೆ ಪ್ರೇರಣೆಯೆ ಶಿಕ್ಷಕರು

## ಹಂಪಿ ಟೈಮ್ಸ್ ಸ್ಟುಡೆಂಟ್ ಕಾಲಂ ಬರೆಯಲು ಪುಸ್ತಕದತ್ತ ಮುಖಮಾಡಿದ ವಿದ್ಯಾರ್ಥಿಗಳು

ಮೊನ್ನೆ ನಮ್ಮ ಕನ್ನಡ ಶಿಕ್ಷಕರು ತರಗತಿಯಲ್ಲಿ ಜನಪದ ಪದ್ಯ ಮಾಡುತ್ತಿದ್ದರು. ಪದ್ಯ ಪ್ರಾರಂಭಕ್ಕೂ ಮುಂಚಿತವಾಗಿ ಜನಪದ ಪ್ರಕಾರಗಳ ಬಗ್ಗೆ ತಿಳಿಸತೊಡಗಿದರು. ಆಗ ತಟ್ಟನೆ ನಮ್ಮ ಅಜ್ಜಿಯ ನೆನಪಾಯಿತು. ಶಿಕ್ಷಕರು ಹೇಳುತ್ತಿರುವುದಕ್ಕೂ ನಮ್ಮ



ಅಜ್ಜಿಯ ಹಾಡುಗಾರಿಕೆಗೂ ಹೊಂದಾಣಿಕೆ ಯಾಗುತ್ತಿತ್ತು. ಆಗ ನಮ್ಮ ಅಜ್ಜಿಯ ಬಗ್ಗೆ ಹೆಮ್ಮೆ ಎನಿಸಿತು. ಇದುವರೆಗೂ ನಮ್ಮ ಅಜ್ಜಿ ಹಾಡುವುದಷ್ಟೆ ಗೊತ್ತಿತ್ತು. ಆದರೆ ಆಕೆಯ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡಿರಲಿಲ್ಲ. ಸಂಜೆ ಆಟದ ವೇಳೆ ನಮ್ಮ ಶಾಲೆಯ ಇಂಗ್ಲೀಷ್ ಶಿಕ್ಷಕರಾದ ಗುರುಬಸವರಾಜ ಸರ್ ಅವರನ್ನು ಕಂಡು ಅಜ್ಜಿಯ ಕುರಿತು ಹೇಳಿದೆ. ಅದಕ್ಕೆ ಅವರು ನಿಮ್ಮ ಅಜ್ಜಿ ಬಗ್ಗೆ ಒಂದು ಲೇಖನವನ್ನು ನೀನೆ ಬರೆಯಬಹುದು ಎಂದರು. ಅವರಿಂದ ಒಂದಿಷ್ಟು ಮಾಹಿತಿ ಪಡೆದು, ಶಾಲೆ ಮುಗಿಸಿಕೊಂಡು ಮನೆಗೆ ಹೋದ ಕೂಡಲೇ ನಮ್ಮ ಅಜ್ಜಿಯ ಜೊತೆ ಮಾತುಕತೆಗೆ ಕುಳಿತೆ. ಅಜ್ಜಿಯ ಜೊತೆಗಿನ ಮಾತುಕತೆಯನ್ನು ಅಕ್ಷರ ರೂಪದಲ್ಲಿ ಬಂಧಿಸಿದೆ.

ನಮ್ಮ ಅಜ್ಜಿ ಹೆಸರು ನೀಲಮ್ಮ. ಈಗ ಆಕೆಯ ವಯಸ್ಸು 70 ವರ್ಷ. ನಮ್ಮ ಅಜ್ಜಿಯ ಊರು ಹಗರಿಬೊಮ್ಮನಹಳ್ಳಿ ತಾಲೂಕಿನ ಏಣಗಿ. ಇದೊಂದು ಕುಗ್ರಾಮ. ಸರಿಯಾದ ಬಸ್ ಸೌಕರ್ಯಗಳಿಲ್ಲದ ಊರು. ನಮ್ಮ ಊರಿನಲ್ಲಿ ಯಾವುದೇ ಹಬ್ಬ, ಸಮಾರಂಭಗಳು ನಡೆದರೂ, ಯಾವುದೇ ಮನೆಯಲ್ಲಿ ಶುಭ ಕಾರ್ಯ ನಡೆದರೂ ಅಲ್ಲಿ ನಮ್ಮ ಅಜ್ಜಿಯ ಹಾಡು ಇದ್ದೇ ಇರುತ್ತದೆ.

ಅಜ್ಜಿ ಹಾಡುತ್ತಾ ಕುಳಿತರೆ ಹೊತ್ತು ಹೋಗಿದ್ದೇ ಗೊತ್ತಾಗುವುದಿಲ್ಲ. ಹಿಂದಿನ ಕಾಲದ ಕಲೆ, ಸಂಸ್ಕೃತಿಯನ್ನು



ಅಜ್ಜಿ ಹಾಡಿನ ಮೂಲಕ ತಿಳಿಸುತ್ತಾಳೆ. ಅಜ್ಜಿ ಸೋಬಾನೆ ಪದ, ಬೀಸುವ ಪದ, ಕುಟ್ಟುವ ಪದ, ಹಂತಿ ಪದ, ತೊಟ್ಟಿಲ ಪದ ಮುಂತಾದ ಜನಪದ ಹಾಡುಗಳನ್ನು ಹಾಡುತ್ತಾಳೆ. ಅಜ್ಜಿ ಆಗಾಗ ಜನಪದ ಕಥೆಗಳನ್ನೂ ಹೇಳುತ್ತಾಳೆ. ಊರಿನಲ್ಲಿ ಯಾವುದೇ ಮನೆಗಳಲ್ಲಿ ಹೆಣ್ಣು ಮಕ್ಕಳು ಋತುಮತಿಯರಾದಾಗ ಅಜ್ಜಿಯನ್ನು ಕರೆಸುತ್ತಾರೆ. ಅಜ್ಜಿ ಅವರಿಗೆ ಅಗತ್ಯ ಸಲಹೆಗಳನ್ನು ನೀಡುತ್ತಾ ಕಾರ್ಯಕ್ರಮದಲ್ಲಿ ತಮ್ಮ ಸಂಗಡಿಗರೊಂದಿಗೆ ಸೋಬಾನೆ ಪದ ಹಾಡುತ್ತಾಳೆ. ಅಜ್ಜಿ ಹಾಡುತ್ತಾ ಹಾಡುತ್ತಾ ತನ್ನನ್ನೇ ತಾನು ಮೈಮರೆತುಬಿಡುತ್ತಾಳೆ. ಕೆಲವು ಸಲ ಊಟವನ್ನು ಮಾಡದೇ ಹಾಡುತ್ತಾಳೆ. ತಡರಾತ್ರಿವರೆಗೂ ಜನ ಕುಳಿತು ಅಜ್ಜಿಯ ಹಾಡುಗಳನ್ನು ಕೇಳುತ್ತಾರೆ.

ಹಾಡಿನ ಮೂಲಕ ಅಜ್ಜಿ ಹಿಂದಿನ ಸಂಸ್ಕೃತಿಯನ್ನು ನಮ್ಮ ಮುಂದೆ ತೆರೆದಿಡುತ್ತಾರೆ. ಬಾಲ್ಯದಲ್ಲಿ ತನ್ನ ತಾಯಿಯಿಂದ ಕಲಿತ ಹಾಡುಗಾರಿಕೆಯನ್ನು ಅಜ್ಜಿ ಈಗಲೂ ಮುಂದುವರೆಸಿದ್ದಾರೆ. ಈಗಿನ ಮಕ್ಕಳಿಗೂ ಸಹ ಹಾಡುವುದನ್ನು ಹೇಳಿಕೊಡುತ್ತಾರೆ. ಇತ್ತಿಚಿನ ವರ್ಷಗಳಲ್ಲಿ ಟಿ.ವಿ, ಮೊಬೈಲ್ ಬಂದ ನಂತರ ಹಾಡು ಕೇಳುವವರು ಕಡಿಮೆಯಾಗಿದ್ದಾರೆ ಎನ್ನುವುದು ಅಜ್ಜಿಯ ಕೊರಗು. 'ಇಂದಿನ ಮಕ್ಕಳು ಇಂತಹ ಜನಪದ ಹಾಡು ಕೇಳಲು ಇಷ್ಟೊಡುವುದಿಲ್ಲ. ಬರೀ ಮೂರುಹೊತ್ತು ಮೊಬೈಲ್‌ನಲ್ಲೇ ಕಾಲ ಕಳೆಯುತ್ತಾರೆ' ಎನ್ನುತ್ತಾ ತನ್ನ ಬೇಸರ ವ್ಯಕ್ತಪಡಿಸುತ್ತಾಳೆ. ನಮ್ಮ ಅಜ್ಜಿಗೆ ಅಲ್ಲಲ್ಲಿ ಕೆಲ ಗ್ರಾಮದವರು ಸನ್ಮಾನ ಮಾಡಿದ್ದಾರೆ. ಇದನ್ನು ಕೇಳಿ ನನಗೆ ನಮ್ಮ ಅಜ್ಜಿ ಬಗ್ಗೆ ಹೆಮ್ಮೆ ಎನಿಸಿತು.

ಅಜ್ಜಿ ಮದುವೆಗಳಲ್ಲೂ ಹಾಡುತ್ತಾಳೆ. ಸಪ್ತಪದಿಯ ಮಹತ್ವವನ್ನು ಹಾಗೂ ಗಂಡ ಹೆಂಡತಿಯರು ಹೇಗೆ ಇರಬೇಕೆಂಬುದನ್ನು ಹಾಡಿನ ಮೂಲಕ ತಿಳಿಸುತ್ತಾಳೆ. ನಮ್ಮ ಊರಿನಲ್ಲಿ ನಡೆಯುವ ಹಬ್ಬಗಳ ಬಗ್ಗೆ ಅಜ್ಜಿ ಸವಿಸ್ತಾರವಾದ ಮಾಹಿತಿ ನೀಡುತ್ತಾಳೆ. ಊರಿನ ಇತಿಹಾಸ, ಕಲೆ, ಸಂಸ್ಕೃತಿ, ಆಚಾರ, ವಿಚಾರಗಳ ಬಗ್ಗೆ ಯಾರೇ ಕೇಳಿದರೂ ಹೇಳುತ್ತಾಳೆ. ಸ್ನೇಹಿತರು ಹೇಗೆ ಇರಬೇಕೆಂಬುದನ್ನು ಸಹ ಹಾಡಿನ ಮೂಲಕ ತಿಳಿಸುತ್ತಾಳೆ.

ಹೊಲದಲ್ಲಿ ಜನಪದ, ಪಂಚಮಿಯಲ್ಲಿ ಜನಪದ, ದೇವರ ಸನ್ನಿಧಿಯಲ್ಲಿ ಕೂಡ ಜನಪದ, ಡೊಳ್ಳು ಕುಣಿತದಲ್ಲಿ ಜನರು ಸೇರಿ ಜನಪದ ಹೇಳುತ್ತಾರೆ. ಅಂತಹ ಮಹತ್ತರವಾದ ಜನಪದ ಕಲೆಯಲ್ಲಿ ನಮ್ಮ ಅಜ್ಜಿ ಹಾಡುಗಾರಿಕೆಯು ನನಗೆ ಹೆಮ್ಮೆ ತಂದಿದೆ. ಅಜ್ಜಿ ಹಾಡುವಾಗ ಮುದ್ದು ಮನಸ್ಸಿನಿಂದ ಹಾಡುತ್ತಾಳೆ. "ನಮ್ಮ ಜನಪದವನ್ನು ಯಾವತ್ತು ಮರೆಯಬಾರದು, ನಾವು ಜನಪದಕ್ಕೆ ಗೌರವ ಕೊಡಬೇಕು" ಎಂದು ನಮ್ಮ ಅಜ್ಜಿ ನೀಲಮ್ಮ ಹೇಳುತ್ತಾಳೆ. ಹಾಡುಗಳಿಂದ ಎಲ್ಲರ ಮನ ರಂಜಿಸುತ್ತಿರುವ ಮತ್ತು ಮೌಲ್ಯಗಳನ್ನು ತಿಳಿಸುತ್ತಿರುವ ಅಜ್ಜಿಗೆ ನನ್ನದೊಂದು ಅಕ್ಷರದ ಹಾರ ತೊಡಿಸುತ್ತಿದ್ದೇನೆ. ಮುಂದೆ ನಾನು ಅಜ್ಜಿಯಿಂದ ಜನಪದ ಹಾಡುಗಳನ್ನು ಕಲಿಯಲು ಪ್ರಯತ್ನಿಸುತ್ತೇನೆ.

**■ ಎಸ್. ರೇವತಿ. 9ನೇ ತರಗತಿ**
**ಸರ್ಕಾರಿ ಪ್ರೌಢಶಾಲೆ, ಬಸರಕೋಡು.**
**ಹ.ಬೊ.ಹಳ್ಳಿ(ತಾ) ವಿಜಯನಗರ ಜಿಲ್ಲೆ**

# ಎನ್‌ಇಪಿ ಆರಂಭದಿಂದಲೂ ಪದವಿ ವಿದ್ಯಾರ್ಥಿಗಳ ಕೈಸೇರದ ಮುದ್ರಣ ಅಂಕಪಟ್ಟಿ: ಆಕ್ರೋಶ

## ವಿಶ್ವವಿದ್ಯಾಲಯಗಳ ವಿರುದ್ಧ ಎಸ್‌ಎಫ್‌ಐ ಪ್ರತಿಭಟನೆ




**■ ಹಂಪಿ ಟೈಮ್ಸ್ ಹರಪನಹಳ್ಳಿ**

2021 ಎನ್‌ಇಪಿ ಪ್ರಾರಂಭದಿಂದಲೂ ಇಲ್ಲಿಯವರೆಗೂ ಪದವಿ ವಿದ್ಯಾರ್ಥಿಗಳ ಮುದ್ರಣ ಅಂಕ ಪಟ್ಟಿಗಳನ್ನು ನೀಡದಿರುವ ವಿಶ್ವವಿದ್ಯಾಲಯಗಳ ಕ್ರಮವನ್ನು ಭಾರತ ವಿದ್ಯಾರ್ಥಿ ಫೆಡರೇಷನ್ ಕಾರ್ಯಕರ್ತರು ಖಂಡಿಸಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಎಸ್‌ಎಫ್‌ಐ ಸಂಘಟನೆಯ ನೇತೃತ್ವದಲ್ಲಿ ಗುರುವಾರ ಪ್ರತಿಭಟನೆ ನಡೆಸಿ ಗ್ರೇಡ್ 2 ತಹಶೀಲ್ದಾರ ನಾಗರಾಜ ಅವರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದರು. ಕರ್ನಾಟಕ ರಾಜ್ಯದಲ್ಲಿ ಸುಮಾರು 50 ಲಕ್ಷಕ್ಕೂ ಅಧಿಕ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅಲ್ಲದೇ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2021ರಿಂದ ಜಾರಿಯಾಗಿದ್ದು, ಆ ಸಾಲಿನ ವಿದ್ಯಾರ್ಥಿಗಳ ಮುದ್ರಣ ಅಂಕಪಟ್ಟಿಯನ್ನು ಇದುವರೆಗೆ ನೀಡದಿರುವುದು ಖಂಡನೀಯ. ರಾಜ್ಯದಲ್ಲಿ 22ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳು ಅಂಕ ಪಟ್ಟಿ ನೀಡದೇ ಉಳಿಸಿಕೊಂಡಿವೆ. ಸರಕಾರ ಕೂಡಲೇ ವಿದ್ಯಾರ್ಥಿಗಳ ಸಮಸ್ಯೆಯನ್ನು ಪರಿಗಣಿಸಿ ಯುಯುಎಂಎಸ್ ಸಿಸ್ಟಮ್‌ನ್ನು ಬದಲಾಯಿಸಿ ಮುದ್ರಣಾ ಅಂಕಪಟ್ಟಿಗಳನ್ನು ನೀಡಲು ಸೂಕ್ತ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ರಾಜ್ಯಪಾಲರು 22-12-2022 ರಂದು ಮುದ್ರಣ ಅಂಕಪಟ್ಟಿಗಳನ್ನು ನೀಡುವಂತೆ ಆದೇಶ ಹೊರಡಿಸಿದ್ದಾರೆ. ಅವರ ಆದೇಶವನ್ನು ಗಂಭೀರವಾಗಿ ಪರಿಗಣಿಸದೇ ತಾಂತ್ರಿಕ ದೋಷಗಳ ಕಾರಣ ನೀಡಿ ತಡೆಹಿಡಿದಿರುವುದು ಹಲವು ಅನುಮಾನಗಳನ್ನ ಹುಟ್ಟುಹಾಕಿದೆ. ಶಿಕ್ಷಣ ಸಚಿವರು ಮದ್ಯ ಪ್ರವೇಶ ಮಾಡಬೇಕೆಂದು ಎಸ್‌ಎಫ್‌ಐ ಸಂಘಟನೆ ಒತ್ತಾಯಿಸುತ್ತದೆ.

ಈ ವೇಳೆ ಕಾರ್ಯದರ್ಶಿ ಸಂಜುನಾಯ್ಕ್ ಎಲ್.ಜಿ., ತಾಲ್ಲೂಕು ಸಮಿತಿಯ ಮುಖಂಡರಾದ ರಾಹುಲ್ ಕಿಶೋರ್, ಕಿರಣ, ಅಭಿ, ಚಂದ್ರಕಾಂತ್, ಸುನಿಲ್, ವಿಜಯಲಕ್ಷ್ಮಿ, ಶಶಿಕಲಾ, ಅಮೂಲ್ಯ, ಸಿಂಚನಾ ಹಾಗೂ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಹಂಪಿ ಭಕ್ತರ ಪರದಾಟ

## ನೋಡೋರಿಲ್ಲ, ಕೇಳೋರಿಲ್ಲವೇ ?

### ಮಂಟಪದ ಮೆಟ್ಟಿಲುಗಳಿಗೆ ಅಡ್ಡವಾಗಿಟ್ಟ ಬ್ಯಾರಿಕೇಡ್
### ಮಹಿಳೆಯರು,ಮಕ್ಕಳು ಕಟ್ಟೆಯಿಂದ ಇಳಿಯಲು ಹರಸಾಹಸ
### ಆಯತಪ್ಪಿ ಭಕ್ತರಿಗೆ ಅನಾಹುತಗಳಾದರೆ ಯಾರು ಹೊಣೆ?



**■ ಹಂಪಿ ಟೈಮ್ಸ್ ಹೊಸಪೇಟೆ**



ವಿಶ್ವಪಾರಂಪರಿಕ ತಾಣ ಹಾಗೂ ದಕ್ಷಿಣ ಕಾಶಿಯೇಂದೆ ಕರೆಯಲ್ಪಡುವ ಹಂಪಿಗೆ ದೇವರ ದರ್ಶನಕ್ಕಾಗಿ, ಸ್ಮಾರಕಗಳ ವೀಕ್ಷಣೆಗಾಗಿ ನಿತ್ಯ ಸಾವಿರಾರು ಭಕ್ತರು ಹಳ್ಳಿ ಸೇರಿದಂತೆ ನಾನಾ ಜಿಲ್ಲೆ, ರಾಜ್ಯ, ಹಾಗೂ ದೇಶ ವಿದೇಶಗಳಿಂದಲೂ ಆಗಮಿಸುತ್ತಾರೆ. ಆದರೆ ಹಂಪಿಯ ಕೇಂದ್ರಬಿಂದು ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದಲ್ಲಿ ದೇವರ ದರ್ಶನ ಪಡೆದು, ದೇವಾಲಯದ ಶಿಲ್ಪಕಲೆ, ವರ್ಣಚಿತ್ರಗಳು ಹಾಗೂ ದೇವರ ಎದುರು ಕೆಲ ಕ್ಷಣ ಕುಳಿತುಕೊಂಡು ಪ್ರಾರ್ಥಿಸಬೇಕೆನ್ನುವ ಭಕ್ತರ ಆಸೆಗೆ ದೇವಸ್ಥಾನ ಆಡಳಿತ ಮಂಡಳಿ, ಪುರಾತತ್ವ ಇಲಾಖೆ, ಪ್ರವಾಸೋಧ್ಯಮ ಇಲಾಖೆಗಳು ತಣ್ಣೀರೆರಚಿವೆ. ದೇವಸ್ಥಾನದ ಮುಂಭಾಗದಲ್ಲಿ ಪ್ರಾಂಗಣದ ಮೇಲ್ಭಾಗದ ಐತಿಹಾಸಿಕ ಕೆತ್ತನೆಗಳಿಂದ ವಿಜಯನಗರ ಸಾಮ್ರಾಜ್ಯದ ಕಲೆ ಮತ್ತು ಧಾರ್ಮಿಕ ಪರಂಪರೆಯನ್ನು ಜನಸಾಮಾನ್ಯರು ತಿಳಿಯುತ್ತಿದ್ದರು. ಆದರೆ ಇತ್ತಿಚೆಗೆ ಕೇವಲ >>4

# ಪದವಿ ವಿದ್ಯಾರ್ಥಿಗಳಿಗೆ ನೆರವಾದ ನರೇಗಾ ಯೋಜನೆ



**■ ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಉಪ್ಪಾರ ಹೊಸಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಸುಮಾರು 50 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕೆಲಸ ನಿರ್ವಹಿಸುತ್ತಿದ್ದಾರೆ. ಪದವಿ ಶಿಕ್ಷಣಕ್ಕೆ ಹಣ ಹೊಂದಿಸಲು ಪರಿತಪಿಸುತ್ತಿದ್ದ ಬಡಕುಟುಂಬದ ವಿದ್ಯಾರ್ಥಿಗಳಿಗೆ ನರೇಗಾ ಕೈಹಿಡಿದಿದೆ. ಶುಲ್ಕ ಕಟ್ಟಲು ಉದ್ಯೋಗಖಾತ್ರಿ ಯೋಜನೆ ನೆರವಾಗಿದ್ದು, ಶಿಕ್ಷಣ ಮುಂದುವರಿಸಲು ಭರವಸೆ ಮೂಡಿಸಿದೆ.

ಸಿರುಗುಪ್ಪ ತಾಲೂಕಿನ ಉಪ್ಪಾರ ಹೊಸಳ್ಳಿ ಗ್ರಾಮದ ವಿದ್ಯಾರ್ಥಿ ಹುಸೇನಪ್ಪ ತನ್ನ ಪದವಿ ಶಿಕ್ಷಣಕ್ಕಾಗಿ ನೀಡಬೇಕಾದ ಶುಲ್ಕದ ಕುರಿತು ಮನೆಯವರಿಗೆ ತಿಳಿಸದೇ ಉದ್ಯೋಗ ಖಾತ್ರಿ >>4

> ಕಳೆದ ವರ್ಷವಷ್ಟೇ ನನ್ನ ಪದವಿ ವಿದ್ಯಾಭ್ಯಾಸ ಮುಗಿಯಿತು. ರಜೆ ಸಮಯದಲ್ಲಿ ನರೇಗಾ ಕೆಲಸಕ್ಕೆ ಹೋಗುತ್ತಿದ್ದೆ. ಬಂದ ಹಣದಿಂದ ನನ್ನ ಪದವಿ ವಿದ್ಯಾಭ್ಯಾಸದ ವೇಳೆ ಕಾಲೇಜು ಫೀಸ್, ಪುಸ್ತಕ ಮತ್ತು ಬಸ್‌ಪಾಸ್‌ಗಾಗಿ ವ್ಯಯಿಸಿದ್ದೆ. ಮನೆಯಲ್ಲಿ ಹಣ ಕೇಳುತ್ತಿರಲಿಲ್ಲ.
> **– ಹುಸೇನಪ್ಪ, ಉಪ್ಪಾರ** ಹೊಸಳ್ಳಿ ಗ್ರಾಮ ನಿವಾಸಿ.

> ಗ್ರಾಮ ಪಂಚಾಯತ್‌ಗಳು ಜನಸ್ನೇಹಿಯಾಗಿದ್ದು, ನರೇಗಾ ಯೋಜನೆ ಯಶಸ್ವಿಯಾಗಿ ಅನುಷ್ಠಾನ ಮಾಡಲಾಗುತ್ತಿದೆ. ನರೇಗಾ ಯೋಜನೆ ಗ್ರಾಮೀಣಾಭಿವೃದ್ಧಿಗೆ ವರದಾನವಾಗಿದೆ. ಸರ್ಕಾರದ ನಿರ್ದೇಶನದಂತೆ ಗ್ರಾಪಂನಿಂದ ದೊರೆಯುವ ಸೌಲಭ್ಯಗಳ ಮಾಹಿತಿಯನ್ನು ಕಾಲಕಾಲಕ್ಕೆ ವಾರ್ಡ್‌ಸಭೆ, ಗ್ರಾಮಸಭೆಗಳ ಮೂಲಕ ಜನರಿಗೆ ಮಾಹಿತಿ ತಲುಪಿಸುವ ಕಾರ್ಯ ಮಾಡಲಾಗುತ್ತಿದೆ.
> **– ನಾಗಮಣಿ ಅತ್ತಳ್ಳಿ, ಗ್ರಾಪಂ ಪಿಡಿಒ, ಉಪ್ಪಾರ-ಹೊಸಳ್ಳಿ ಗ್ರಾಪಂ.**

## ಸ್ಟುಡೆಂಟ್ ಕಾಲಂ

### ನಾನು ರೈತನಾಗುವೆ



ರಾಮ ಎಂಬ ರೈತನು ಇದ್ದನು. ಅವನಿಗೆ ಮೂರು ಮಕ್ಕಳು; ಇವರು ಓದಿನಲ್ಲಿ ತುಂಬಾ ಆಸಕ್ತಿ ಹೊಂದಿದ್ದರು. ರಾಮನಿಗೆ ತನ್ನ ಮಕ್ಕಳನ್ನು ಓದಿಸಬೇಕು ಎಂಬ ತೀವ್ರ ಇಚ್ಛೆ ಇತ್ತು. ಆದ್ದರಿಂದ, ಅವರು ಹಗಲು-ರಾತ್ರಿ ದುಡಿದು ಮಕ್ಕಳನ್ನು ಶಾಲೆಗೆ ಕಳುಹಿಸಲು ಶ್ರಮ ಪಟ್ಟರು. ರಾಮನ ಕನಸು ತನ್ನ ಮಕ್ಕಳಿಗೆ ಉತ್ತಮ ಶಿಕ್ಷಣ ಒದಗಿಸಿ, ಅವರ ಜೀವನವನ್ನು ಸುಧಾರಿಸುವುದಾಗಿತ್ತು.

ಒಂದು ದಿನ ರಾಮನ ಮಗನು, ತನ್ನ ತಂದೆಯ ಬಳಿ ಬಂದು ಹೇಳಿದನು:"ಅಪ್ಪ, ನಾನು ರೈತ ಆಗಬೇಕೆಂದಿದ್ದೇನೆ." ರಾಮನಿಗೆ ಈ ಮಾತು ಕೇಳಿ ಆಶ್ಚರ್ಯವಾಯಿತು. ಮಗನ ಹೃದಯದಿಂದ ಬಂದ ಮಾತುಗಳನ್ನು ಕೇಳಿ ಅವರು "ಮಗನೇ, ನೀನು ಓದಿದರೆ ಮಾತ್ರ ರೈತ ಅಲ್ಲದೆ ದೊಡ್ಡ ಕೆಲಸಗಾರನಾಗಿ ಜೀವನದಲ್ಲಿ ಯಶಸ್ವಿಯಾಗಬಹುದು."

ಮಗ ತಕ್ಷಣವೇ ಅಪ್ಪ, ನಾನು ತಿಳಿದುಕೊಂಡಿದ್ದೇನೆ – ನನ್ನ ಅಣ್ಣ ಹಾಗೂ ಅಕ್ಕ ಓದುತ್ತಿದ್ದಾರೆ. ಅವರು ನಮ್ಮ ಕುಟುಂಬದ ಭವಿಷ್ಯವನ್ನು ಭದ್ರಗೊಳಿಸುತ್ತಾರೆ. ಆದರೆ ನಾನು ರೈತನಾಗಲು ಬಯಸುತ್ತೇನೆ. ಒಂದು ಕುಟುಂಬವನ್ನು ಪೋಷಿಸುವ ಬದಲು, ನಾನು ಸಾವಿರ ಮಂದಿಗೆ ಆಹಾರ ಪೂರೈಸುವ ಸಾಮರ್ಥ್ಯವನ್ನು ಹೊಂದುತ್ತೇನೆ. ರೈತನ ಕೆಲಸ ಅಷ್ಟಿಷ್ಟಲ್ಲ ಅಪ್ಪ, ಅದು ಹೆಮ್ಮೆಯ ಕೆಲಸ!" ಎಂದನು ಆಗ ರಾಮನ ಕಣ್ಣುಗಳು ತೇವವಾದವು"ಮಗನೇ, ನಿನ್ನ ಮಾತುಗಳು ನನಗೆ ಹೆಮ್ಮೆ ತಂದಿವೆ. ಜನರು 'ಉಳುವವನೆ ಒಡೆಯ' ಎಂದು ಹೇಳುತ್ತಾರೆ. ನಿನ್ನಂತೆ ಮಗನನ್ನು ಪಡೆದಿರುವುದು ನನಗೆ ಪುಣ್ಯ."ರಾಮ ತನ್ನ ಮಗನನ್ನು ತಬ್ಬಿಕೊಂಡು ಮಾತುತೋಡಿದರು.



"ನೀನು ರೈತನಾದರೂ ನನ್ನ ಹೆಮ್ಮೆಯ ಮಗನೇ ಆಗಿರುತ್ತೀಯ. ರೈತನಾದರೂ ಬದುಕು ದೊಡ್ಡದು; ಇತರರಿಗೆ ಪ್ರಾಮುಖ್ಯ."**ಆ ದಿವಸ, ರಾಮ ಮತ್ತು ಅವನ ಮಗನ ನಡುವೆ ನಡೆದ ಮಾತುಕತೆ ಅವರು ಇಬ್ಬರ ಜೀವನದ ಹೊಸ ಆಯಾಮವನ್ನು ತೋರಿಸಿ. "ರೈತ" ಎಂಬ ವೃತ್ತಿ ಅವರು ಕೇವಲ ಆಹಾರ ಉತ್ಪಾದನೆಯ ಕಾರ್ಯವಷ್ಟೇ ಅಲ್ಲ, ಸಮಾಜದ ಸಹಜ ಸ್ಥಿತಿಗೆ ಮೂಲಸ್ತಂಭವಾಗಿದೆ ಎಂಬುದನ್ನು ಅರಿತರು.ಮುಂದೆ ರಾಮನ ಮಗ ಪ್ರಗತಿಪರ ರೈತನಾಗಿ ಹಲವು ಹೊಸ ರೀತಿಯ ಕೃಷಿ ಪದ್ಧತಿ ಅಳವಡಿಸಿಕೊಂಡು ಪ್ರಗತಿಪರ ರೈತನಾಗಿ ಸುಖದಿಂದ ಬಾಳಿದನು.

– ಕಲ್ಪನಾ, 8ನೇ ತರಗತಿ
ಸರ್ಕಾರಿ ಪ್ರೌಢಶಾಲೆ ಗದ್ದಿಕೆರೆ.ಹ.ಬೊ ಹಳ್ಳಿ ತಾಲ್ಲೂಕು

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**


**– ಜಾಹೀರಾತು ವ್ಯವಸ್ಥಾಪಕರು.**

# ಇಲ್ಲ ಎಂದು ಕೊಳ್ಳಬೇಡಿ ಎಲ್ಲವೂ ಇದೆ ಎಂದುಕೊಳ್ಳಿ

## ಭಿಕ್ಷುಕನ ಮುಖಕ್ಕೆ ಎಸೆದ ತುಂಡು ಹಳೇಬಟ್ಟೆ ದೇವರಿಗೆ ದೀಪವಾಯ್ತು | ಭಿಕ್ಷುಕನ ಸ್ವಾಭಿಮಾನಿ ಬದುಕಿಗೆ ಬೆಳಕಾಯ್ತು

**'ಕೈಯ್ಯಾಗ ಬೆಣ್ಣೆ ಇಟುಕೊಂಡು ತುಪ್ಪ ಹುಡುಕಿದರು'** ಎಂಬ ಜನಪದರ ಮಾತಿನಂತೆ ಸಾಕಷ್ಟು ಅವಕಾಶಗಳು ಕಣ್ಣೆದುರಿಗೆ ಇರುವಾಗ ಬೇರೆ ಅವಕಾಶಗಳಿಗೆ ಎಡತಾಕುತ್ತಿರುತ್ತೇವೆ. ಯಾವ ಸಣ್ಣ ಅವಕಾಶಗಳನ್ನು ಕಳೆದುಕೊಳ್ಳದೇ ಅಥವಾ ಸೋಮಾರಿತನ ತೋರದೇ ಕಣ್ಣಿಗೊತ್ತಿ ಕೊಂಡು ನಿಷ್ಠೆಯಿಂದ ನಿಭಾಯಿಸಿದರೆ, ಮುಂದೊಂದು ದಿನ ಅವೇ ದೊಡ್ಡ ಸ್ಥಾನಮಾನಗಳನ್ನು ಕಲ್ಪಿಸಿ ಕೊಡುತ್ತವೆ.ತಾಳ್ಮೆ ಬೇಕಷ್ಟೆ. ಪ್ರಕೃತಿ ನಮಗೆ ಕಡ್ಲೆಕಾಯಿ ಕೊಡುತ್ತೆ. ಅದರಲ್ಲಿನ ಬೀಜವನ್ನು ನಾವೇ ಸುಲಿದುಕೊಳ್ಳಬೇಕು. ಅವಕಾಶಗಳು ಬರುತ್ತವೆ ಬಾಚಿಕೊಳ್ಳುವುದು ನಮ್ಮಕೈಯ್ಯಲೇ ಇದೆ.

ಒಂದು ಗ್ರಾಮದಲ್ಲಿದ್ದ ಹಾಳು ದೇಗುಲದಲ್ಲಿ ವಿಕಲಚೇತನ ಭಿಕ್ಷುಕನೊಬ್ಬ ವಾಸವಾಗಿದ್ದ. ಆದರೆ ಆ ಗುಡಿಗೆ ಯಾರೂ ಬಾರದೇ ಇರುವುದರಿಂದ, ಆತನಿಗೆ ಭಿಕ್ಷೆ ಸಿಗುತ್ತಿರಲಿಲ್ಲ. ಎಲ್ಲರೂ ಈ ದೇಗುಲಕ್ಕೆ ಬರುವಂತೆ ಮಾಡಬೇಕೆಂದು ಒಮ್ಮೆ ಯೋಚನೆ ಮಾಡಿ, ದೇಗುಲವನ್ನು ಮತ್ತು ಒಳಗಿರುವ ಮೂರ್ತಿಯನ್ನು ತಾನೇ ನಿರಂತರ ಸ್ವತಃ ಸ್ವಚ್ಛಗೊಳಿಸಿದ. ನಂತರ ಗ್ರಾಮದಲ್ಲಿದ್ದ ಶ್ರೀಮಂತ ಮನೆಗೆ ಹೋಗಿ ಭಿಕ್ಷೆ ಬೇಡಿದ. ಆ ಮನೆಯಲ್ಲಿದ್ದ ಮಹಿಳೆ ಈತನನ್ನು ನೋಡಿ ಅಸಹ್ಯಪಟ್ಟುಕೊಂಡು ಯಾವ ಭಿಕ್ಷೆ ನೀಡದೇ ಚೆನ್ನಾಗಿ ಬೈದು, ಕೈಯೊಳ್ಳಗಿದ್ದ ಹಳೆಬಟ್ಟೆಯನ್ನು ಅವನ ಮುಖದ ಮೇಲೆ ಕೋಪದಿಂದೆಸೆದು ಕಳಿಸಿದಳು. ತನಗಾದ ಅವಮಾನ ಸಹಿಸಿಕೊಂಡ ಭಿಕ್ಷುಕ, ಆಕೆ ಕೊಟ್ಟ ಆ ಹಳೇಬಟ್ಟೆಯನ್ನೇ ಚೆನ್ನಾಗಿ ತೊಳೆದು, ತುಂಡಾಗಿ ಕತ್ತರಿಸಿ, ಬತ್ತಿಗಳನ್ನು ಹೊಸೆದ. ಅದೇ ಗ್ರಾಮದ ಅಂಗಡಿಯಲ್ಲಿ ಕಾಡಿಬೇಡಿ ದೀಪದ ಎಣ್ಣೆಯನ್ನೂ ತೆಗೆದುಕೊಂಡು ಬಂದ. ದಿನವೂ ಸಂಜೆ ದೇಗುಲದ ಮೂರ್ತಿಯ ಮುಂದೆ ದೊಡ್ಡದಾಗಿ ಎರಡು ದೀಪಗಳನ್ನು ಬೆಳಗಿಸ ತೊಡಗಿದ.





ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Scan For Digital Colourful
HAMPI TIMES E-paper

ರಾತ್ರಿಹೊತ್ತಲ್ಲಿ ಆ ಗುಡಿಯ ಮುಂದೆ ಹಾದು ಹೋಗುವ ಜನರು ಬೆಳಕಿನಿಂದ ಕಂಗೊಳಿಸುತ್ತಿರುವ ಮೂರ್ತಿಯನ್ನು ನೋಡಿ ಒಳಗೆ ಬಂದು ಕೈ ಮುಗಿಯುತೊಡಗಿದರು. ಗುಡಿಯ ಸ್ವಚ್ಛತೆ ಜನರ ಬಾಯಿಂದ ಬಾಯಿಗೆ ಹರಿದಾಡಿ ಗ್ರಾಮದವರೆಲ್ಲರೂ ಬರತೊಡ ಗಿದರು. ಎಲ್ಲರೂ ಮೂರ್ತಿಗೆ ಕೈ ಮುಗಿದ ನಂತರ ಪಕ್ಕದಲ್ಲಿ ಕೂತಿದ್ದ ಆ ಭಿಕ್ಷುಕನಿಗೂ ಕಾಸು ಗಳನ್ನು ಹಾಕತೊಡಗಿದರು. ಹೀಗೆ ಜನರು ಕೊಟ್ಟ ಕಾಸನ್ನು ಸಂಗ್ರಹಿಸಿ, ಪೂಜೆಗೆ ಬೇಕಾದ ಹೂ ಹಣ್ಣುಗಳನ್ನು ಆ ಭಿಕ್ಷುಕ ಖರೀದಿಸಿ ಮಾರಾಟ ಮಾಡತೊಡಗಿದ. ಮುಂದೆ ಭಿಕ್ಷೆ ಬೇಡುವುದನ್ನೇ ಬಿಟ್ಟು ಸಣ್ಣದೊಂದು ಅಂಗಡಿ ತೆರೆದ. ಹೀಗೆ ದಿನವೂ ವ್ಯಾಪಾರದಿಂದ ಸ್ವಾಭಿಮಾನಿಯಾಗಿ ಬದುಕನ್ನು ಕಟ್ಟಿಕೊಂಡ.

ಕೆಲ ತಿಂಗಳುಗಳ ನಂತರ ಆ ಶ್ರೀಮಂತ ಮಹಿಳೆಗೆ ಈ ವಿಷಯ ಗಮನಕ್ಕೆ ಬಂತು. ಆಕೆಯೂ ಕೂಡ ಗುಡಿಗೆ ಬಂದು, ಅಲ್ಲಿಯೇ ಇದ್ದ ಆ ವ್ಯಾಪಾರಿಯನ್ನು ವಿಚಾರಿಸಿದಳು. ಆಗ ಆತ ಎದ್ದುನಿಂತು 'ತಾಯಿ ನಿಮ್ಮಿಂದ ಉಪಕಾರವಾಯಿತು. ತಾವು ಆದಿನ ನಿಮ್ಮ ಮನೆಗೆ ಬೇಡಲು ಬಂದಾಗ ನನ್ನ ಮುಖದ ಮೇಲೆ ಹಳೇಬಟ್ಟೆಯನ್ನು ಎಸೆದಿರಿ. ಅದನ್ನು ನಾನು ಬತ್ತಿಯಾಗಿ ಹೊಸೆದೆ...' ಹೀಗೆ ಹಿಂದಿನ ವೃತ್ತಾಂತವೆಲ್ಲಾ ವಿವರಿಸಿ ತಾನು ಬದಲಾದುದನ್ನು ವಿವರಿಸಿದ. ಆ ಮಹಿಳೆ ತಾನು ಅಂದು ಈತನಿಗೆ ಮಾಡಿದ್ದ ಅವಮಾನವನ್ನು ನೆನೆದು ಕ್ಷಮೆ ಬೇಡಿದಳು.

ಅಂದರೆ ಅವಕಾಶಗಳು ಯಾವ ರೂಪದಲ್ಲಿ ಬಂದು ಯಾವ ರೂಪದಲ್ಲಿ ನಮ್ಮನ್ನು ಬದಲಾಯಿಸುತ್ತವೆಯೋ ಯಾರು ಬಲ್ಲರು? 'ಇಲ್ಲ ಎಂದು ಕೊಳ್ಳಬೇಡಿ ಎಲ್ಲವೂ ಇದೆ ಎಂದುಕೊಳ್ಳಿ' ಆಗ ಇಷ್ಟಾರ್ಥ ಸಿದ್ಧಿಸುತ್ತದೆ. ಉತ್ತಮ ಆಲೋಚನೆಗಳಿದ್ದಲ್ಲಿ ಉತ್ತಮ ದಾರಿಗಳು ನಮಗಾಗಿ ತೆರೆದುಕೊಳ್ಳುತ್ತವೆ. ಅವಸರ ಬೇಡ. ಬದುಕಿನಲ್ಲಿ ನಮಗೆಷ್ಟು ಸಿಗಬೇಕಾಗಿದೆಯೋ ಅದು ಸಿಕ್ಕೇ ಸಿಗುತ್ತದೆ. ಪರಿಶ್ರಮ ಇರಬೇಕೇ ವಿನಃ ಚಿಂತೆ ಬೇಡ.

# ದೇವರ ಬ್ಯಾಂಕಿನಲ್ಲಿ ಇರಲಿ ನಮ್ಮದೊಂದು ಖಾತೆ

ಆತ ಓರ್ವ ಅತ್ಯಂತ ಶ್ರೀಮಂತ ವ್ಯಕ್ತಿ. ಮುಟ್ಟಿದ್ದೆಲ್ಲ ಚಿನ್ನವಾಗುವ ಮಿಡಾಸನ ಕಥೆಯಂತೆಯೇ ಆತ ಕೈಗೊಂಡ ಕಾರ್ಯಗಳೆಲ್ಲ ಯಶಸ್ವಿಯಾಗಿ ಹಣದ ಹೊಳೆಯೇ ಆತನ ಬದುಕಿನಲ್ಲಿ ಹರಿಯುತ್ತಿತ್ತು.

ಸುಸಜ್ಜಿತವಾದ ಆಕರ್ಷಕ ಮನೆ, ಓಡಾಡಲು ಕಾರು ನೆಚ್ಚಿನ ಮಡದಿ ಮಕ್ಕಳು,ಆಳುಕಾಳುಗಳು ಏರು ಗತಿಯಲ್ಲಿ ಸಾಗುತ್ತಿರುವ ವ್ಯಾಪಾರ-ವ್ಯವಹಾರ, ಸಮಾಜದಲ್ಲಿ ಉನ್ನತ ಸ್ಥಾನಮಾನ, ಕೀರ್ತಿ ಎಲ್ಲವೂ ಆತನಿಗೆ ಇತ್ತು.

'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ' ಎಂಬ ಮಾತಿನಂತೆ ಇತ್ತೀಚೆಗೆ ಆತನಿಗೆ ತಾನು ಸತ್ತ ಮೇಲೆ ತನ್ನ ಎಲ್ಲಾ ಆಸ್ತಿ ಅಂತಸ್ತು ಸಂಪತ್ತನ್ನು ತಾನು ಹೊತ್ತೊಯ್ಯಲಾಗುವುದಿಲ್ಲ ಎಂಬ ಆತಂಕ ಕಾಡತೊಡಗಿತ್ತು. ಈ ಕುರಿತು ಸದಾಗಂಭೀರ ಯೋಚನೆಯಲ್ಲಿ ಮುಳುಗುತ್ತಿದ್ದ ಆತನ ಚರ್ಯೆಯನ್ನು ಗಮನಿಸಿದ ಪತ್ನಿ, ಮಕ್ಕಳು ಆತನನ್ನು ಪ್ರಶ್ನಿಸಿದಾಗ ಅವರ ಮಾತನ್ನು ಮಧ್ಯದಲ್ಲಿಯೇ ತಳ್ಳಿ ಹಾಕಿದ ಆತ ಮತ್ತಷ್ಟು ವ್ಯಾಕುಲನಾದ.

ಕೊನೆಗೊಂದು ದಿನ ಅತ್ಯಂತ ಮೇಧಾವಿಗಳಾದ ತನ್ನ ಕಚೇರಿಯ ಸಿಬ್ಬಂದಿಯನ್ನು ತನ್ನ ಕಚೇರಿಯ ಮೀಟಿಂಗ್ ಹಾಲ್ ಗೆ ಕರೆದು ನನ್ನ ಆಸ್ತಿ ಪಾಸ್ತಿಗಳನ್ನು, ಸಕಲ ವೈಭವಗಳನ್ನು ಸತ್ತ ನಂತರವೂ ಅನುಭವಿಸಲು ಮೇಲಿನ ಲೋಕಕ್ಕೆ! ಕೊಂಡೊಯ್ಯಲು ಸಾಧ್ಯವೇ? ಎಂದು ಪ್ರಶ್ನಿಸಿದನು.

ಇಲ್ಲಿಯವರೆಗೂ ಕಚೇರಿ ನಿರ್ವಹಣೆ, ಕಚೇರಿಗೆ ಸಂಬಂಧಪಟ್ಟ ದೇಶದ ವಿವಿಧ ಕಂಪನಿಗಳೊಂದಿಗೆ ವ್ಯಾಪಾರ ಮತ್ತು ತಮ್ಮ ಕೆಲಸ ಕಾರ್ಯಗಳ ಅಭಿವೃದ್ಧಿಯ ಕುರಿತು ಮಾತ್ರ ಯೋಚಿಸುತ್ತಿದ್ದ ಕಂಪನಿಯ ಸಿಬ್ಬಂದಿಗೆ ತಮ್ಮ ಕಂಪನಿಯ ಮಾಲೀಕನ ಈ ಪ್ರಶ್ನೆ ಸೋಜಿಗವನ್ನುಂಟು ಮಾಡಿತು. ಏನು ಉತ್ತರ ಕೊಡಬೇಕೆಂದು ಗೊತ್ತಾಗದೆ ಕಕ್ಕಾವಿಕ್ಕಿ ಯಾದರು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಬಹಳಷ್ಟು ಯೋಚಿಸಿದ ಮೇಲೆ ಎಲ್ಲರೂ ತಮಗೆ ತೋಚಿದ ಸಲಹೆಗಳನ್ನು ನೀಡಲಾರಂಭಿ ಸಿದರು. ಆದರೆ ಆ ಎಲ್ಲ ಸಲಹೆಗಳು ಸ್ಮಶಾನದವರೆಗೆ ಮಾತ್ರ ಎಂಬ ಸತ್ಯ ಮಾಲೀಕ ಮತ್ತು ಕೆಲಸಗಾರರಿಬ್ಬರಿಗೂ ಗೊತ್ತಿತ್ತು.

ಗಹನವಾದ ಚರ್ಚೆಯಲ್ಲಿ ತೊಡಗಿದ ಮಾಲೀಕ ಮತ್ತು ಸಿಬ್ಬಂದಿಗಳಿಗೆ ನೀರು, ಚಹಾ ಮತ್ತು ಬಿಸ್ಕೆಟ್ ನೀಡಲು ಓಡಾಡುತ್ತಿದ್ದ ವೃದ್ಧ ಜವಾನನೊಬ್ಬ ತನ್ನಲ್ಲಿಯೇ ತಾನು ಮುಗುಳ್ನಗುತ್ತಿರುವುದನ್ನು



ಗಮನಿಸಿದ ಮಾಲೀಕ ಸಿಡಿಮಿಡಿ ಗೊಂಡು ಆತನನ್ನು ಕರೆದನು.

ಅದೇಕೆ ಹಾಗೆ ನಗುತ್ತಿರುವೆ? ನಿನಗೇನಾದರೂ ಇದರ ಕುರಿತು ಅರಿವಿದ್ದರೆ ನೀನು ಕೂಡ ನಿನ್ನ ಅಭಿಪ್ರಾಯವನ್ನು ಹಂಚಿಕೊಳ್ಳಬಹುದು ಎಂದು ಹೇಳಿದ.

ಮಾಲೀಕನ ಕರೆ ಕೇಳಿ ಗಾಬರಿಯಿಂದಲೇ ಮಾಲೀಕನ ಬಳಿ ಬಂದ ಜವಾನ ಇದೀಗ ತುಸು ನಿರಾತಂಕದಿಂದ ತಲೆಯನ್ನು ಎತ್ತಿ "ಸರ್, ತಾವು ವ್ಯಾಪಾರದ ಅಭಿವೃದ್ಧಿಗಾಗಿ ವಿದೇಶಗಳಿಗೆ ಹೋಗುತ್ತಿರಲ್ಲವೇ" ಎಂದು ಕೇಳಿದ.

ಆತನ ಪ್ರಶ್ನೆಗೆ "ಹೌದು, ಹೋಗುತ್ತೇನೆ" ಎಂದು ಮಾಲೀಕರು ಹೇಳಿದರು. "ಯಾವ್ಯಾವ ದೇಶಗಳಿಗೆ ಹೋಗಿದ್ದೀರಿ ಸರ್" ಎಂದು ಜವಾನ ಕೇಳಲು ಮಾಲೀಕರು ತುಸು ಹೆಮ್ಮೆಯಿಂದ ಅಮೆರಿಕ, ಇಂಗ್ಲೆಂಡ್, ರಷ್ಯಾ, ದುಬೈ ಎಂದು ಹಲವಾರು ದೇಶಗಳ ಹೆಸರನ್ನು ಹೇಳಿದರು. ಆಗ ಜವಾನ ಸರ್ ಅಮೇರಿಕಾದಲ್ಲಿ ಭಾರತದ ರೂಪಾಯಿ ಹಣ ಚಲಾವಣೆ ಆಗುತ್ತದೆಯೇ? ಎಂದು ಕೇಳಿದ.

"ಬಹುರಾಷ್ಟ್ರೀಯ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ನೀನು ಇಂಥ ಪ್ರಶ್ನೆ ಕೇಳಬಹುದೇ?

ಅಮೆರಿಕಾದಲ್ಲಿ ಡಾಲರ್ ಮಾತ್ರ ಬಳಸಲಾಗುತ್ತದೆ" ಎಂದು ಉತ್ತರಿಸಿದ. "ಹಾಗಾದರೆ ನೀವು ರುಪಾಯಿ ಹಣವನ್ನು ಹೇಗೆ ಡಾಲರ್ ಗೆ ಪರಿವರ್ತಿಸುತ್ತೀರಿ " ಎಂದು ಜವಾನ ಕೇಳಲು ತುಸು ಅಸಹನೆಯಿಂದಲೇ ಮಾಲೀಕ

" ಏರ್ಪೋರ್ಟ್ ನ ಕರೆನ್ಸಿ ಎಕ್ಸ ಚೇಂಜ್ ವಿಭಾಗದಲ್ಲಿ ಭಾರತದ ಹಣವನ್ನು ನೀಡಿದರೆ ಅದಕ್ಕೆ ಸರಿಸಮನಾದ ಮೊತ್ತದ ಅಮೆರಿಕದ ಡಾಲರಗಳನ್ನು ನೀಡುತ್ತಾರೆ, ಆದರೆ ಈಗೇಕೆ ಇಂತಹ ಅಸಂಬದ್ಧ ಪ್ರಶ್ನೆ?" ಎಂದು ಕೇಳಿದ.

ಹೇಳುತ್ತೇನೆ ಸರ್... ಭಾರತದ ರೂಪಾಯಿ ಅಮೆರಿಕದಲ್ಲಿ ಡಾಲರ್ ಆಗಿ, ಇಂಗ್ಲೆಂಡಿನಲ್ಲಿ ಪೌಂಡ ಆಗಿ, ದುಬೈನಲ್ಲಿ ದಿರ್ಹಮ್ ಆಗಿ ಚಲಾಯಿಸಲ್ಪಡುತ್ತದೆ ಅಲ್ಲವೇ? ಎಂದು ಪ್ರಶ್ನಿಸಲು ಮಾಲೀಕನೊಂದಿಗೆ ಆತನ ಎಲ್ಲ ಸಿಬ್ಬಂದಿಗಳು ಹೌದೆಂದು ತಲೆ ಆಡಿಸಿದರು.

ಕೂಡಲೇ ಜವಾನ "ಹಾಗೆಯೇ ದೇವರ ಲೋಕದಲ್ಲಿ ನಮ್ಮ ಹಣಕ್ಕೆ ಯಾವುದೇ ಮೌಲ್ಯ ಇರುವುದಿಲ್ಲ. ಅದು ಅಲ್ಲಿ ಚಲಾವಣೆ ಆಗುವುದೂ ಇಲ್ಲ... ಅಲ್ಲಿ ಚಲಾವಣೆ ಆಗುವುದು ಬೇರೆಯದೇ ವಸ್ತು. ಅದನ್ನು ನಾವು ನಮ್ಮ ದೇಶದಲ್ಲಿ ವಿನಿಯೋಗಿಸುವ ಮೂಲಕ ಅಲ್ಲಿ ಪಡೆದುಕೊಳ್ಳಬಹುದು" ಎಂದು ಹೇಳಿದ.

ಮಾಲೀಕ ಲಗುಬಗೆಯಿಂದ "ಹಾಗಾದರೆ ಆ ಪದ್ಧತಿ ಯಾವುದು" ಎಂದು ಕೇಳಿದ.

"ನಿಮ್ಮಲ್ಲಿರುವ ಸಂಪತ್ತಿನ ಕೆಲ ಭಾಗವನ್ನು ವಿನಿಯೋಗಿಸಿ ಬಡವರಿಗೆ, ದೀನ ದಲಿತರಿಗೆ, ಅಸಹಾಯಕರಿಗೆ, ಅಂಗವಿಕಲರಿಗೆ ದಾನ ಧರ್ಮಗಳನ್ನು ಮಾಡಬೇಕು., ನಿರ್ಗತಿಕ ಬಡ ಮಕ್ಕಳಿಗೆ ಓದಿಸುವ ಮೂಲಕ ನಿಮ್ಮ ಹಣವನ್ನು ಸದ್ವಿನಿಯೋಗ ಮಾಡಬೇಕು. ಆಗ ನಿಮಗೆ ನೆಮ್ಮದಿ, ತೃಪ್ತಿ ಸಂತಸ ದೊರೆಯುತ್ತದೆ. ಇದರ ಜೊತೆಗೆ ನೀವು ಮಾಡಿದ ಒಳ್ಳೆಯ ಕರ್ಮಗಳು, ದಾನಗಳು ಪುಣ್ಯದ ರೂಪದಲ್ಲಿ ದೇವರ ಲೋಕದಲ್ಲಿನ ನಿಮ್ಮ ಕರ್ಮದ ಖಾತೆಗೆ ಜಮಾ ಆಗುತ್ತವೆ" ಎಂದು ಅತ್ಯಂತ ಸರಳವಾಗಿ ಉತ್ತರಿಸಿದನು ಆ ವೃದ್ಧ ಜವಾನ.

ಜವಾನನ ಮಾತು ತಮಗೆಲ್ಲ ಒಪ್ಪಿಗೆಯಾಯಿತು ಎಂಬಂತೆ ಎಲ್ಲ ಸಿಬ್ಬಂದಿ ವರ್ಗದವರು ಚಪ್ಪಾಳೆ ಹೊಡೆದರೆ "ಎರಡೆರಡು ಡಿಗ್ರಿ ಪಡೆದು ಮ್ಯಾನೇಜ್ಮೆಂಟ್ ಕಲಿತು ಸಾಕಷ್ಟು ಹಣ ಸಂಪಾದಿಸಿದ ನಾವೇ ಜಾಣರು ಎಂಬಂತೆ ವರ್ತಿಸುತ್ತಿದ್ದ ನಮಗೆಲ್ಲಾ ಜೀವನಾನುಭವ ಎಲ್ಲಕ್ಕಿಂತ ದೊಡ್ಡ ವಿದ್ಯೆ ಎಂಬ ಪಾಠವನ್ನು ನೀನು ಕಲಿಸಿಕೊಟ್ಟೆ" ಎಂದು ಸಂತಸದಿಂದ ಆ ಜವಾನನನ್ನು ತಬ್ಬಿಕೊಂಡ ಮಾಲೀಕ ಆತನನ್ನು ಮುಕ್ತವಾಗಿ ಪ್ರಶಂಶಿಸಿದ.

ಮುಂದೆ ತನ್ನ ಸಂಪತ್ತಿನ ಬಹಳಷ್ಟು ಭಾಗವನ್ನು ಸಾಮಾಜಿಕ ಕಾರ್ಯಗಳಲ್ಲಿ ವಿನಿಯೋಗಿಸಿದ ಆತನನ್ನು ಎಲ್ಲರೂ ಕೊಂಡಾಡುತ್ತಿದ್ದರು. ಅದೆಲ್ಲಕ್ಕಿಂತ ಹೆಚ್ಚಾಗಿ ತನ್ನ ಸಾಮಾಜಿಕ ಕಾರ್ಯಗಳ ಉಪಯೋಗ ಪಡೆದುಕೊಂಡವರ ಕಣ್ಣುಗಳಲ್ಲಿ ಮೂಡುತ್ತಿದ್ದ ಭರವಸೆಯ ಬೆಳಕನ್ನು ಕಂಡಾಗ ಆತನಿಗೆ ಪರಮಾನಂದದ ಅನುಭವವಾಗುತ್ತಿತ್ತು.

ಹೌದಲ್ಲವೇ ಸ್ನೇಹಿತರೆ? ಜನ ಸೇವೆಯಲ್ಲಿಯೇ ಜನಾರ್ಧನನ ಸೇವೆ ಇದೆ, ನಮ್ಮ ಕೈಲಾದಷ್ಟು ಜನರ ಬದುಕಿನ ಬವಣೆಗಳನ್ನು ನೀಗಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕು. ಸೇವೆಯಲ್ಲಿಯೂ ಮೂರು ವಿಧಗಳಿದ್ದು ತನು ಮನ ಧನ ಸೇವೆಗಳು ಎಂದು ಹೇಳಬಹುದು. ಸಾಕಷ್ಟು ಹಣವನ್ನು ಹೊಂದಿರುವ ವ್ಯಕ್ತಿ ಧನ ಸಹಾಯವನ್ನು ಮಾಡಿದರೆ,ಹಣ ಸಹಾಯ ಮಾಡದಿದ್ದರೂ ಮಾನಸಿಕವಾಗಿ ಮತ್ತು ದೈಹಿಕವಾಗಿ ಶ್ರಮವನ್ನು ಹಾಕುವ ಮೂಲಕ ನಾವು ತನು ಮನ ಸೇವೆಯನ್ನು ಮಾಡಬಹುದು. ಸಮಾಜ ಸೇವೆ ಎನ್ನುವುದು ಪ್ರತಿಯೊಬ್ಬರ ಬದುಕಿನ ಸಾಮಾಜಿಕ ಜವಾಬ್ದಾರಿ ಎಂಬ ಪರಿಕಲ್ಪನೆಯ ಮೂಸೆಯಲ್ಲಿ ಹೊಸ ಹುಟ್ಟನ್ನು ಕಾಣಬೇಕು. ಆಗ ಮಾತ್ರ ಆ ಪರಮಾತ್ಮನ ಕರ್ಮದ ಬ್ಯಾಂಕಿನಲ್ಲಿ ನಮ್ಮ ಖಾತೆಯನ್ನು ತೆರೆದದ್ದಕ್ಕೂ ಸಾರ್ಥಕವಾಗುತ್ತದೆ. ಏನಂತೀರಾ?

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಕನ್ನಡ ನಾಡು

ನಾವು ಕನ್ನಡಿಗರು
ವಿಶಾಲ ಭಾವದವರು
ಬಹೂ ಭಾಷಾ ಪ್ರೀಯರು
ನೆರೆಹೊರೆಯವರಿಗೆ ಪ್ರೀತಿ ಪಾತ್ರರು।

ನಮ್ಮದು ಆಡಳಿತ ಭಾಷೆ ಕನ್ನಡ
ಬಳಸಲು ನಮಗೆ ಮುಜುಗರ
ಹೀಗೆಯೇ ನಮ್ಮ ಕನ್ನಡ
ಕೇಳೋರಿಲ್ಲ ನಮ್ಮ ಕನ್ನಡ।

ನವ್ವಂಬರ್ ತಿಂಗಳ ಕನ್ನಡ
ಅಭಿಯಾನ ನಮ್ಮಲಿ ಆ ತಿಂಗಳು
ಕುಣಿದು ಕುಪ್ಪಳಿಸುವುದು ಕನ್ನಡ
ಮರು ತಿಂಗಳು ಕೇಳೋರಿಲ್ಲ ಕನ್ನಡ।

ಸುಂದರ ಲಿಪಿ ಕನ್ನಡ
ವಿಶ್ವದಲ್ಲಿ ಎರಡನೇ ಸ್ಥಾನ
ಕನ್ನಡ ಬಳಸಲು ಬಿಗುಮಾನ
ಮಾತೃ ಭಾಷೆ ಯಾಕೆ ಅವಮಾನ!?

ದೇಶ ವಿದೇಶದಲ್ಲಿ ನಮ್ಮ ಕನ್ನಡಿಗರು
ಕನ್ನಡ ಆಚರಣೆ ವಿಜೃಂಭಿಸುವರು
ಕರೆದು ಮಾನ ಸನ್ಮಾನ ಮಾಡುವರು
ಕನ್ನಡಕ್ಕೆ ಮಾಡುವರು ಶ್ರಮದಾನ।

ಪಾಲಕರಿಗೆ ಬೇಕು ಕನ್ನಡ ಮೋಹ
ಅವರಿಗೆ ಬೇಕು ಕನ್ನಡ ಶಾಲೆ ದಾಹ
ಇಂಗ್ಲೀಷ್ ಮಮ್ಮಿ ಡ್ಯಾಡಿ ಕಿತ್ತುಹಾಕಿ
ಬರಲಿ ಅಪ್ಪ ಅಮ್ಮ ಕನ್ನಡ ಮೋಹ।

ಕನ್ನಡಕ್ಕಿದೆ ವಿಶೇಷ ಸ್ಥಾನ ಮಾನ
ಏಕೋ ಅನುಷ್ಠಾನ ನಮಗೆ ನಿಧಾನ
ಕನ್ನಡ ಎನ್ನಲು ಬೇಕು ಉತ್ಸಾಹ
ಇರಬೇಕು ಕನ್ನಡಿಗರಲ್ಲಿ ಕನ್ನಡ ದಾಹ।

**–ಚಂದ್ರಶೇಖರಯ್ಯ ರೋಣದಮಠ.**

# ಕೊಟ್ಟೂರು ಪಟ್ಟಣದ ಆಸ್ಪತ್ರೆಯಲ್ಲಿ ಬಿಬಿಲೋಷನ್ ಔಷಧಿ ಖಾಲಿ ಖಾಲಿ

## ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ನೀಡಲು ವೈದ್ಯರಿದ್ದಾರೆ | ಗೃಹಲಕ್ಷ್ಮಿ ರೊಕ್ಕ ಔಷಧಿ ಪಾಲು

■ ಬಂದಾತರ ಪ್ರಕಾಶ ಕೊಟ್ಟೂರು.

ಚರ್ಮ ಕಾಯಿಲೆಯ ನೀರುಗುಳ್ಳಿ, ಕಜ್ಜಿ ಹಾಗೂ ತಿಂಡಿ ಕೆರೆತ ನೊವುಗಳಿಗೆ ಲೇಪಿಸುವ "ಬಿಬಿಲೋಷನ್ ಔಷಧಿ' ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಲಭ್ಯವಿಲ್ಲದೆ, ರೋಗಿಗಳು ಖಾಸಗಿ ಅಂಗಡಿಯಲ್ಲಿಖರೀದಿಸುವಪರಿಸ್ಥಿತಿನಿರ್ಮಾಣವಾಗಿದೆ. ಕೇವಲ ಬೀಬಿಲೋಷನ್ ಔಷಧಿ ಮಾತ್ರವಲ್ಲ, ಪ್ರತಿಯೊಂದು ಔಷಧಿ ಖಾಲಿ ಆಗುವ ಪೂರ್ವದಲ್ಲಿ ಇಂಡೆಂಟ್ ಹಾಕಿ ಕಾಯ್ದಿರಿಸಿ ಕೊಳ್ಳಬೇಕು ಆದರೆ ಆಸ್ಪತ್ರೆಯ ಫಾರ್ಮಸಿ ವಿಭಾಗದ ಅಧಿಕಾರಿಗಳ ನಿರಾಸಕ್ತಿಯಿಂದ ಬಹುತೇಕ ಔಷಧಿಗಳು ಆಸ್ಪತ್ರೆಯಲ್ಲಿ ಸಿಗದೆ ರೋಗಿಗಳು ಹೊರಗಡೆ ಖರೀದಿಸುವಂತಹ ದುಸ್ಥಿತಿ ಇಲ್ಲಿ ನಿರ್ಮಾಣವಾಗಿದೆ ಎಂಬುಂದು ಸಾರ್ವಜನಿಕರ ಆರೋಪ.

ಸಾಮಾನ್ಯ ಔಷಧಿಗಳನ್ನೇನು ಹೊರಗೆ ರೋಗಿಗಳು ಖರಿದಿಸುವರು, ಆದರೆ ತುರ್ತು ಪರಿಸ್ಥಿತಿಯಲ್ಲಿ ರೋಗಿಗಳು ಸರ್ಕಾರಿ ಆಸ್ಪತ್ರೆಗೆ ಬಂದರೆ, ಹೀಗೆ ಔಷಧಿ ಖಾಲಿ ಆಗಿದೆ ಎಂದರೆ, ರೋಗಿಯ ಪರಿಸ್ಥಿತಿ ಹೇಗೆ ಎಂಬುದು ಸಾರ್ವಜನಿಕರ ಕಳವಳ.





ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳು ಹಾಗೂ ವೈದ್ಯರು, ಶ್ರುಶೂಷಕರು ಉತ್ತಮ ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿನ ಫಾರ್ಮಸಿ ವಿಭಾಗದವ ನಿರ್ಲಕ್ಷ್ಯದಿಂದ ರೋಗಿಗಳಿಗೆ ಔಷಧಿಗಳು ಸರಿಯಾಗಿ ಸಿಗದಂತಾಗಿವೆ. ರೋಗಿಗಳು ಕಾರಣ ಕೇಳಿದರೆ ಫಾರ್ಮಸ್ಸಿಯಲ್ಲಿ ಸ್ಟಾಕ್ ಇಲ್ಲ ಎನ್ನುವ ಪ್ರತಿಕ್ರಿಯೆ ಮಾತ್ರ ಕೇಳಿಸುತ್ತೆ ಎನ್ನುವುದು ಜನರ ಆರೋಪವಾಗಿದೆ.

ಸರ್ಕಾರಿ ಆಸ್ಪತ್ರೆ ಬಯಸಿ ಬರುವ ರೋಗಿಗಳಿಗೆ ಔಷಧಿಗಳು ಲಭಿಸಲು, ಇಲ್ಲಿನ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನ ಪ್ರತಿನಿಧಿಗಳು, ಫಾರ್ಮಸ್ಸಿ ವಿಭಾಗಕ್ಕೆ ಆಗಾಗ ಭೇಟಿ ಕೊಟ್ಟು, ಔಷಧಿ ಎಷ್ಟು ಬಂದಿದೆ, ಖಾಲಿ ಎಷ್ಟು, ಅವಧಿ ಹಾಗೂ ಖರ್ಚು, ವೆಚ್ಚ ಈ ಬಗ್ಗೆ ಪರಿಶೀಲಿಸಿ ಸಂಪೂರ್ಣ ವಿವರಣೆ ಪಡೆಬೇಕಾಗಿದೆ. ಔಷಧಿಗಳ ಪಟ್ಟಿ ಜನರಿಗೆ ಕಾಣಿಸುವಂತೆ ಹಾಕಬೇಕು ಎಂದು ಜನರು ಆಗ್ರಹಿಸಿದ್ದಾರೆ.

> ಆಸ್ಪತ್ರೆಯ ಫಾರ್ಮಸ್ಸಿಯಲ್ಲಿ ಬೀಬಿಲೋಷನ್ ಖಾಲಿ ಆಗಿರುವ ಬಗ್ಗೆ ಗಮನಕ್ಕಿಲ್ಲ, ಫಾರ್ಮಸ್ಸಿ ಅವರು ಔಷಧಿ ಖಾಲಿಯಾಗುವ ಪೂರ್ವಬಾವಿ ಇಂಡೆಂಟ್ ಹಾಕಿಲ್ಲ, ಅವರ ಇಂಡೆಂಟ್ ಹಾಕದೇ ನಮಗೆ ತಿಳಿಯದು, ಮಾಹಿತಿ ಪಡೆದು ಶೀಘ್ರ ಪೂರೈಸುವ ವ್ಯವಸ್ಥೆ ಮಾಡುವೆ.
> **– ಕೆ.ನಾಗೇಶ, ಸೂಪರ್ಡೆಂಟ್, ಸಮುದಾಯ ಆರೋಗ್ಯ ಕೇಂದ್ರ ಕೊಟ್ಟೂರು.**

## ಆನಂದ ಬಾಣ





## ಸ್ಪೀಕರ್ ಯು.ಟಿ.ಖಾದರ್ ಹೇಳಿಕೆ
# ಉತ್ತರ ಕರ್ನಾಟಕದ ಪ್ರಗತಿಗೆ ಆದ್ಯತೆ
## ಡಿ.9 ರಿಂದ 19ರವರೆಗೆ ಬೆಳಗಾವಿಯಲ್ಲಿ ಅಧಿವೇಶನ

■ ಹಂಪಿ ಟೈಮ್ಸ್ ಬಳ್ಳಾರಿ



ರಾಜ್ಯ ವಿಧಾನಮಂಡಲ ಚಳಿಗಾಲದ ಅಧಿವೇಶನ ಡಿಸೆಂಬರ್ 9 ರಿಂದ 19 ರವರೆಗೆ ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯಲಿದೆ ಎಂದು ವಿಧಾನಸಭಾ ಸ್ಪೀಕರ್ ಯು.ಟಿ.ಖಾದರ್ ತಿಳಿಸಿದರು.

ಅವರು ಗುರುವಾರ ಮಂಗಳೂರಿನ ಸರ್ಕ್ಯೂಟ್‌ಹೌಸ್ ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಮಂಡ್ಯದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಇರುವುದರಿಂದ ಅಧಿವೇಶನವನ್ನು ಡಿಸೆಂಬರ್ 19 ಕ್ಕೆ ಮುಕ್ತಾಯಗೊಳಿಸಲು ಸರ್ಕಾರವು ನಿರ್ಧರಿಸಿದೆ. ಅಧಿವೇಶನ ಮುಂದುವರಿಸುವ ಕುರಿತು ಡಿಸೆಂಬರ್ 9ರಂದು ಸ್ಪೀಕರ್ ಅಧ್ಯಕ್ಷತೆಯಲ್ಲಿ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಕಾನೂನು ಸಚಿವರು, ಎಲ್ಲಾ ರಾಜಕೀಯ ಮುಖಂಡರು, ವಿರೋಧ ಪಕ್ಷದ ಮುಖಂಡರು ಸಭೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದರು.




ಅಧಿವೇಶನದಲ್ಲಿ ರಾಜ್ಯದ ಅಭಿವೃದ್ಧಿ ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದ ಅಭಿವೃದ್ಧಿ ಕುರಿತು ಚರ್ಚೆಯಾಗಬೇಕಿದೆ. ಇದರಿಂದ ಆ ಭಾಗದ ಜನರ ಭಾವನೆಗಳನ್ನು ಗೌರವಿಸಿದಂತಾಗುತ್ತದೆ. ಈ ನಿಟ್ಟಿನಲ್ಲಿ ಆಡಳಿತ ಪಕ್ಷ ಹಾಗೂ ಪ್ರತಿಪಕ್ಷ ಸಹಕರಿಸಬೇಕು ಎಂದು ಸ್ಪೀಕರ್ ಮನವಿ ಮಾಡಿದರು.

## ಭದ್ರಣ್ಣ ಅವರ ತಂದೆ ತಾಯಿ ಸ್ಮರಣಾರ್ಥ, ಹಾಲಪ್ಪ ಸ್ನೇಹಿತರ ಬಳಗದ ಸಹಯೋಗದಲ್ಲಿ
# ನಾಳೆ ಉಚಿತ ನೇತ್ರ ತಪಾಸಣಾ, ಶಸ್ತ್ರ ಚಿಕಿತ್ಸೆ ಶಿಬಿರ

■ ಹಂಪಿ ಟೈಮ್ಸ್ ಹರಪನಹಳ್ಳಿ

ಶಂಕರ ಕಣ್ಣಿನ ಆಸ್ಪತ್ರೆ ಹಾಗೂ ಎಸ್.ಎಂ.ವೀರಭದ್ರಯ್ಯ (ಭದ್ರಣ್ಣ), ಇವರ ತಂದೆ ತಾಯಿಯವರ ಸ್ಮರಣಾರ್ಥವಾಗಿ ಹಾಗೂ ಎಸ್.ಎಂ. ಬಸವರಾಜಯ್ಯ, ಬೆನ್ನೂರು ಹಾಲಪ್ಪ ಸ್ನೇಹಿತರ ಬಳಗದವರ ಸಹಯೋಗದಲ್ಲಿ ಉಚಿತ ನೇತ್ರ ತಪಾಸಣಾ ಮತ್ತು ಶಸ್ತ್ರ ಚಿಕಿತ್ಸೆ ಶಿಬಿರ ಶನಿವಾರ ನ.30 ರಂದು ನಡೆಯಲಿದೆ.

ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಸೊಸೈಟಿ ವಿಜಯನಗರ ಜಿಲ್ಲಾ ಅಂಧತ್ವ ನಿಯಂತ್ರಣಾ ಕಾರ್ಯಕ್ರಮ, ತಾಲೂಕು ವೈದ್ಯಾಧಿಕಾರಿಗಳ ಕಛೇರಿ ಹರಪನಹಳ್ಳಿ ಸಂಯುಕ್ತಾಶ್ರಯದಲ್ಲಿ ಅಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಉಚಿತ ನೇತ್ರ ತಪಾಸಣೆ ನಡೆಯಲಿದೆ. ರೋಗಿಗಳಿಗೆ ಉಚಿತವಾಗಿ ಕಣ್ಣಿನ ಶಸ್ತ್ರ ಚಿಕಿತ್ಸೆ ನಡೆಸಲಾಗುವುದು. ಶಿಬಿರಕ್ಕೆ ಬರುವವರು ಕಡ್ಡಾಯವಾಗಿ ಇತ್ತಿಚ್ಚಿನ 2 ಪೋಟೋ ಹಾಗೂ 2 ರೇಷನ್ ಕಾರ್ಡ, ಆದಾರ್ ಕಾರ್ಡ ಪ್ರತಿಯನ್ನು ತರಬೇಕು.

ಪಟ್ಟಣ ಸೇರಿದಂತೆ ತಾಲೂಕಿನ ಸುತ್ತಮುತ್ತಲಿನ ಗ್ರಾಮದ ಸಾರ್ವಜನಿಕರು ಈ ಶಿಬಿರದ ಸದುಪಯೋಗ ಪಡೆಯ ಬಹುದು. ವಿವರಗಳಿಗಾಗಿ ಎಸ್.ಎಂ. ವೀರಭದ್ರಯ್ಯ (ಭದ್ರಣ್ಣ) –9739020441, ಎಸ್.ಎಂ.ಬಸವ ರಾಜಯ್ಯ –9845582424, ಬೆನ್ನೂರು ಹಾಲಪ್ಪ–9945703155 ಅವರನ್ನು ಸಂಪರ್ಕಿಸ ಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಕನ್ನಡ ಭಾಷೆಯ ಅಸ್ಮಿತೆ ಕಾಪಾಡುವುದು ಎಲ್ಲರ ಜವಾಬ್ದಾರಿ : ಬಿಇಓ ಕರಣಂ

■ ಹಂಪಿ ಟೈಮ್ಸ್ ಕೂಡ್ಲಿಗಿ

ಕನ್ನಡ ಭಾಷೆಯ ಅಸ್ಮಿತೆಯನ್ನು ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಬಿಇಓ ಪದ್ಮನಾಭ ಕರಣಂ ಹೇಳಿದರು.

ಪಟ್ಟಣದ ಸರ್ಕಾರಿ ಜೂನಿಯರ್ ಕಾಲೇಜು ಪ್ರೌಢಶಾಲಾ ವಿಭಾಗದ ಸಭಾಂಗಣದಲ್ಲಿ ಗುರುವಾರ ಎಸ್ ಎಸ್ ಎಲ್ ಸಿ ಫಲಿತಾಂಶ ಸುಧಾರಣೆಗಾಗಿ ತಾಲೂಕು ಮಟ್ಟದ ಒಂದು ದಿನದ ಕನ್ನಡ ಭಾಷಾ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು. ವಿಶ್ವದಲ್ಲಿಯೆ ಕರ್ನಾಟಕದ ಕನ್ನಡ ಸಂಸ್ಕೃತಿ ಶ್ರೀಮಂತವಾಗಿದ್ದು, ಇಂದಿನ ತಂತ್ರಜ್ಞಾನದ ಆಧುನಿಕ ದಿನಮಾನಗಳಲ್ಲಿ ನಮ್ಮ ದೇಶಿಯ ಕನ್ನಡ ಸಂಸ್ಕೃತಿ ಬಳಸುವುದರೊಂದಿಗೆ ಅದನ್ನು ಉಳಿಸಿ, ಬೆಳೆಸುವ ಕರ್ತವ್ಯ ನಮ್ಮೆಲ್ಲರದ್ದಾಗಿದೆ ಎಂದರು. ಕನ್ನಡ ಸಾಹಿತ್ಯ ಸಂಪತ್ತು ಅಧಿಕವಾಗಿದ್ದು, ಸಾಹಿತ್ಯವನ್ನು ಓದುವ ಮನಸ್ಸು ಇಂದಿನ ಯುಗದಲ್ಲಿ ಕಡಿಮೆ ಇದೆ. ಇದರಿಂದ ಸಹಜವಾಗಿ ಕನ್ನಡ ಭಾಷಾ ಬಳಕೆ ನೈಪಥ್ಯಕ್ಕೆ ಸರಿಯುತ್ತದೆ. ಆದ್ದರಿಂದ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದಲ್ಲಿ ಮಕ್ಕಳಿಗೆ ಕನ್ನಡ ಭಾಷೆಯ ಮಹತ್ವವನ್ನು ಪರಿಚಯಿಸಿ, ಇದರ ಆಳ,ಹರಿವನ್ನು ಮಕ್ಕಳಿಗೆ ತಿಳಿಸಬೇಕು. ಇದರಿಂದ ಅವರು ಪ್ರಭಾವಿತರಾಗಿ ಕನ್ನಡ ಭಾಷೆ ಬಳಕೆಗೆ ಮನಸ್ಸು ಮಾಡುವರು ಎಂದರು. ಬಿಸಿಯೂಟ ಯೋಜನೆ ಸಹಾಯಕ ನಿರ್ದೇಶಕ ಕೆ.ಜಿ. ಆಂಜನೇಯ ಕನ್ನಡ ಭಾಷೆಯ ಸತ್ವದ ಕುರಿತು ಕಾರ್ಯಾಗಾರದಲ್ಲಿ ಮನಮುಟ್ಟುವಂತೆ ತಿಳಿಸಿದರು.



ಕನ್ನಡ ಭಾಷಾ ಸಂಪನ್ಮೂಲ ವ್ಯಕ್ತಿಗಳಾದ ಟಿ.ಎಂ.ಬಸವರಾಜ, ಕೆ.ಎ.ಕೊಟ್ರೇಶಪ್ಪ, ಇಸ್ಮಾಯಿಲ್ ತಳಕಲ್ ಕಾರ್ಯಾಗಾರದಲ್ಲಿ ಎಸ್ ಎಸ್ಎಸ್ಎಲ್‌ಸಿ ಫಲಿತಾಂಶ ಉತ್ತಮೀಕರಣಕ್ಕೆ ಶಿಕ್ಷಕರಿಗೆ ಮಾರ್ಗದರ್ಶನ ನೀಡಿದರು. ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ಅಧ್ಯಕ್ಷ ಪಿ.ಶಿವರಾಜ್, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಎಸ್.ವಿ.ಸಿದ್ದರಾಧ್ಯ, ಕಸಾಪ ಅಧ್ಯಕ್ಷ ವೀರೇಶ್ ಅಂಗಡಿ, ಭಾಸ್ಕರ ನಾಯ್ಕ್, ಕೆ.ಎಚ್.ಎಂ.ಶಶಿಧರ, ಕನ್ನಡ ಭಾಷಾ ವೇದಿಕೆ ಅಧ್ಯಕ್ಷ ಕೆ.ವೀರಭದ್ರಪ್ಪ, ಕಾರ್ಯದರ್ಶಿ ಎಚ್.ಡಿ.ಉಡುಚಪ್ಪ, ಖಜಾಂಚಿ ಮಹಾಂತೇಶ್ ಸೇರಿದಂತೆ ಕನ್ನಡ ಭಾಷಾ ಶಿಕ್ಷಕರು ಇದ್ದರು.

# ಬಾಲ್ಯವಿವಾಹ ಜಾಗೃತಿ ಮೂಡಿಸಿ : ನ್ಯಾ.ರಾಜೇಶ್

■ ಹಂಪಿ ಟೈಮ್ಸ್ ಬಳ್ಳಾರಿ

ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಬಾಲ್ಯವಿವಾಹ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ಬಾಲ್ಯವಿವಾಹ ಮುಕ್ತ ಭಾರತಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್.ಎನ್ ಹೊಸಮನೆ ಅವರು ಹೇಳಿದರು.

ಜಿಲ್ಲಾ ಕಾನೂನು ಸೇವೆ ಪ್ರಾಧಿಕಾರ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ಸಹಾಯವಾಣಿ – 1098, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ಶ್ರೀ ಮೇಧಾ ಡಿಗ್ರಿ ಕಾಲೇಜು, ರೀಚ್ ಸಂಸ್ಥೆ ಇವರ ಸಹಯೋಗದಲ್ಲಿ ನಗರದ ಕೋಟೆ ಪ್ರದೇಶದ ಶ್ರೀಮೇಧ ಡಿಗ್ರಿ ಕಾಲೇಜಿನ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಬಾಲ್ಯವಿವಾಹ ಮುಕ್ತ ಭಾರತ ಅಭಿಯಾನ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಬಾಲ್ಯವಿವಾಹವು ಬಾಲ್ಯವಿವಾಹ ನಿಷೇಧ ಕಾಯ್ದೆ–2006 ಹಾಗೂ ಪೋಕ್ಸೋ ಕಾಯ್ದೆ ಅನ್ವಯ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಇದ್ದು, ಈ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ವಿನೋದ್ ಕುಮಾರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಜಿಲ್ಲೆಯಲ್ಲಿ ಬಾಲ್ಯ ವಿವಾಹ ಪ್ರಕರಣಗಳು ಹೆಚ್ಚಿದ್ದು, "ಬಾಲ್ಯವಿವಾಹ ಮುಕ್ತ ಭಾರತ" ಅಭಿಯಾನದಡಿ ಶೂನ್ಯ ಸಂಖ್ಯೆಗೆ ತರಬೇಕಾದಲ್ಲಿ ಕೇವಲ ಅಧಿಕಾರಿಗಳು, ಸಂಘ ಸಂಸ್ಥೆಗಳು ಮಾತ್ರ ಪ್ರಯತ್ನ ಮಾಡಿದರೆ ಸಾಲದು ಸಮುದಾಯ ಭಾಗವಹಿಸುವಿಕೆ ಹಾಗೂ ಸಾರ್ವಜನಿಕರೂ ಕೈಜೋಡಿಸಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ತಾವು ಕಾನೂನು ವೃತ್ತಿಜೀವನದಲ್ಲಿ >>4

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಟನಾಗು - ಕಾದು ನೋಡು


ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ

## ಅಧ್ಯಾಯ 10 : ಮಾನವನ ಕಣ್ಣು ಮತ್ತು ವರ್ಣಮಯ ಜಗತ್ತು

**1. ಕೊಟ್ಟಿರುವ ಚಿತ್ರವನ್ನು ಗಮನಿಸಿ, ಚಿತ್ರವು ಸೂಚಿಸುವ ದೃಷ್ಟಿ ದೋಷವನ್ನು ಹೆಸರಿಸಿ ಅದರ ಲಕ್ಷಣಗಳು ಮತ್ತು ಆ ದೋಷವನ್ನು ಸರಿಪಡಿಸಲು ಉಪಯೋಗಿಸುವ ಮಸೂರವನ್ನು ತಿಳಿಸಿ**



APRIL-2019, MARCH-2023

ಉತ್ತರ: ಸಮೀಪ ದೃಷ್ಟಿ (ಮಯೋಪಿಯ)

ಲಕ್ಷಣಗಳು : ಹತ್ತಿರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಿದೆ. ದೂರದೃಷ್ಟಿ ಹೊಂದಿದ ವ್ಯಕ್ತಿ ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಿಲ್ಲ.

ಈ ದೋಷವನ್ನು ಸರಿಪಡಿಸಲು ಉಪಯೋಗಿಸುವ ಮಸೂರ – ನಿಮ್ನ ಮಸೂರ.

**2. ಹೈಪರ್ ಮೆಟ್ರೋಪಿಯ ಅಥವಾ ದೂರ ದೃಷ್ಟಿ ಎಂದರೇನು ? ಅದನ್ನು ಸರಿಪಡಿಸಲು ಬಳಸುವ ಮಸೂರದ ವಿಧವನ್ನು ಹೆಸರಿಸಿ.** JUNE-2019

ಉತ್ತರ: ದೂರದೃಷ್ಟಿ ಹೊಂದಿದ ವ್ಯಕ್ತಿ ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಿದೆ. ಆದರೆ ಹತ್ತಿರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಿಲ್ಲ.

ಈ ದೋಷವನ್ನು ಸರಿಪಡಿಸಲು ಬಳಸುವ ಮಸೂರದ ಸೂಕ್ತ ಸಾಮರ್ಥ್ಯವುಳ್ಳ ಪೀನ ಮಸೂರ.

**3. ಕಣ್ಣಿನ ಹೊಂದಾಣಿಕೆ ಸಾಮರ್ಥ್ಯ ಎಂದರೇನು ? ಸಾಮಾನ್ಯ ದೃಷ್ಟಿಯುಳ್ಳವರಿಗೆ ದೂರ ಬಿಂದು ಮತ್ತು ಸಮೀಪ ಬಿಂದುಗಳಾವುವು?** JUNE-2019

ಉತ್ತರ: ಕಣ್ಣಿನ ಮಸೂರದ ಸಂಗಮ ದೂರವನ್ನು ಹೊಂದಾಣಿಕೆ ಮಾಡುವ ಕಣ್ಣಿನ ಮಸೂರದ ಸಾಮರ್ಥ್ಯವನ್ನು ಕಣ್ಣಿನ ಹೊಂದಾಣಿಕೆ ಇರುತ್ತೇವೆ.

- ದೂರ ಬಿಂದು– ಅನಂತ ದೂರ
- ಸಮೀಪ ಬಿಂದು– 25 ಸೆಂ.ಮೀ

**4. ಮಾನವನ ಕಣ್ಣಿನಲ್ಲಿರುವ ಮಸೂರವು ಹತ್ತಿರದ ವಸ್ತುಗಳನ್ನು ಮತ್ತು ದೂರದ ವಸ್ತುಗಳನ್ನು ನೋಡಲು ಹೇಗೆ ಹೊಂದಾಣಿಕೆ ಮಾಡಿಕೊಳ್ಳುತ್ತದೆ ? ವಿವರಿಸಿ.** MARCH-2023

ಉತ್ತರ: ಸಿಲಿಯರಿ ಸ್ನಾಯುಗಳು ಹಿಗ್ಗಿದಾಗ ಮಸೂರದ ವಕ್ರತೆ ಕಡಿಮೆಯಾಗುತ್ತದೆ ಮತ್ತು ತೆಳ್ಳಗಾಗುತ್ತದೆ. ಆಗ ಮಸೂರದ ಸಂಗಮದೂರವು ಹೆಚ್ಚಾಗುತ್ತದೆ ಮತ್ತು ದೂರದ ವಸ್ತುಗಳ ಸ್ಪಷ್ಟವಾಗಿ ಗೋಚರಿಸುತ್ತವೆ.

ಸಿಲಿಯರಿ ಸ್ನಾಯುಗಳು ಕುಗ್ಗಿದಾಗ ಮಸೂರದ ವಕ್ರತೆ ಹೆಚ್ಚಾಗುತ್ತದೆ ಮತ್ತು ದಪ್ಪವಾಗುತ್ತದೆ. ಆಗ ಮಸೂರದ ಸಂಗಮದೂರವು ಕಡಿಮೆ ಆಗುತ್ತದೆ ಮತ್ತು ಹತ್ತಿರದ ವಸ್ತುಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

**5. ಬೆಳಕಿನ ವರ್ಣ ವಿಭಜನೆ ಎಂದರೇನು? ಪಟ್ಟಕದಲ್ಲಿ ಬೆಳಕು ವಿಭಜನೆ ಹೊಂದಿದ ನಂತರ ಕನಿಷ್ಠ ಬಾಗುವ ಬೆಳಕಿನ ಬಣ್ಣ ಮತ್ತು ಗರಿಷ್ಠ ಬಾಗುವ ಬೆಳಕಿನ ಬಣ್ಣವನ್ನು ತಿಳಿಸಿ** APRIL-2019

ಉತ್ತರ: ಬಿಳಿಯ ಬಣ್ಣವು ಅದರ ವಿಭಿನ್ನ ಬಣ್ಣಗಳ ಘಟಕವಾಗಿ ವಿಭಜನೆ ಹೊಂದುವುದನ್ನು ಬೆಳಕಿನ ವರ್ಣ ವಿಭಜನೆ ಎನ್ನುತ್ತೇವೆ.

- ಕೆಂಪು ಬಣ್ಣವು ಕನಿಷ್ಠ ಬಾಗುವುದು.
- ನೇರಳೆ ಬಣ್ಣವು ಗರಿಷ್ಠವಾಗಿ ಬಾಗುವುದು.

**6. ಭೂಮಿಯ ವಾಯುಮಂಡಲದಲ್ಲಿ ಬೆಳಕಿನ ವಕ್ರೀಭವನದಿಂದ ಕಂಡುಬರುವ ಯಾವುದಾದರೂ ನಾಲ್ಕು ವಿದ್ಯಮಾನಗಳನ್ನು ತಿಳಿಸಿ**

ಉತ್ತರ:
- ಸೂರ್ಯನು ವಾಸ್ತವ ಸೂರ್ಯೋದಯಕ್ಕಿಂತ ಎರಡು ನಿಮಿಷ ಮೊದಲು ಗೋಚರಿಸುವುದು.
- ಸೂರ್ಯನು ವಾಸ್ತವ ಸೂರ್ಯಾಸ್ತದ ಎರಡು ನಿಮಿಷದ ನಂತರ ನಮಗೆ ಗೋಚರಿಸುತ್ತಾನೆ.
- ನಕ್ಷತ್ರದ ತೋರಿಕೆಯ ಸ್ಥಾನವು ಅದರ ನೈಜ ಸ್ಥಾನಕ್ಕಿಂತ ಸ್ವಲ್ಪ ಬೇರೆ ಆಗಿರುವುದು.
- ನಕ್ಷತ್ರಗಳು ಮಿನುಗುವುದು.
- ಕಾಮನಬಿಲ್ಲು ಉಂಟಾಗುವುದು.

**7. ಚಂದ್ರನ ಮೇಲ್ಮೈನಿಂದ ಆಕಾಶವನ್ನು ನೋಡಿದಾಗ ಅದು ಕಪ್ಪಾಗಿ ಕಾಣುತ್ತದೆ.ಏಕೆ ?** SEP-2020


ಉತ್ತರ: ಏಕೆಂದರೆ ಎಲ್ಲ ಬಣ್ಣಗಳು ಚಂದ್ರನಲ್ಲಿರುವ ವಾತಾವರಣದಿಂದ ಹೀರಲ್ಪಡುತ್ತವೆ. ಬೆಳಕನ್ನು ಚದುರಿಸಲು ಅಗತ್ಯವಿರುವ ವಾತಾವರಣದ ಕಣಗಳು ಇರುವುದಿಲ್ಲ.

**8. ಕೊನೆಯ ಬೆಂಚಿನಲ್ಲಿ ಕುಳಿತಿರುವ ಒಬ್ಬ ವಿದ್ಯಾರ್ಥಿಯು ಕಪ್ಪುಹಲಗೆಯ ಬರಹವನ್ನು ಓದಲು ಕಷ್ಟ ಪಡುತ್ತಾನೆ. ಆ ವಿದ್ಯಾರ್ಥಿಗೆ ಯಾವ ದೃಷ್ಟಿ ದೋಷ ಇದೆ ಅದನ್ನು ಹೇಗೆ ಸರಿಪಡಿಸಬಹುದು ?** SEP -2020

ಉತ್ತರ: ಆ ವಿದ್ಯಾರ್ಥಿಗೆ ಸಮೀಪ ದೃಷ್ಟಿ ದೋಷವಿದೆ. ಸೂಕ್ತ ಸಾಮರ್ಥ್ಯ ಹೊಂದಿದ ನಿಮ್ನ ಮಸೂರ ಉಪಯೋಗಿಸಿ ಸರಿಪಡಿಸಬಹುದು.

**9. ಬಿಳಿ ಬಣ್ಣದ ರೋಹಿತದ ಪುನರ್ ಸಂಯೋಜನೆಯ ಚಿತ್ರವನ್ನು ಬರೆದು ಕೆಳಗಿನ ಭಾಗಗಳನ್ನು ಗುರುತಿಸಿ.**
1. ಅತ್ಯಂತ ಹೆಚ್ಚು ಬಾಗುವ ಬೆಳಕಿನ ಕಿರಣ
2. ಅತ್ಯಂತ ಕಡಿಮೆ ಬಾಗುವ ಬೆಳಕಿನ ಕಿರಣ SEP-2020

ಉತ್ತರ:




**10. ಬಿಳಿಯ ಬೆಳಕಿನಲ್ಲಿ ಏಳು ಬಣ್ಣಗಳಿವೆ ಎಂಬುದನ್ನು ನಿರ್ಧರಿಸಲು ಮಾಡಿದ ಪ್ರಯೋಗವನ್ನು ವಿವರಿಸಿ.**

ಉತ್ತರ: ಐಸಾಕ್ ನ್ಯೂಟನ್ ರವರು ಸೂರ್ಯನ ಬೆಳಕಿನ ರೋಹಿತವನ್ನು ಪಡೆಯಲು ಗಾಜಿನ ಪಟ್ಟಕವನ್ನು ಬಳಸಿದ ಮೊದಲಿಗರು. ಅವರು ಮತ್ತೊಂದು ಸಮರೂಪಿ ಪಟ್ಟಕವನ್ನು ಬಳಸಿ ರೋಹಿತದ ಬಣ್ಣಗಳನ್ನು ಪ್ರತ್ಯೇಕಿಸಲು ಪ್ರಯತ್ನಿಸಿದರು. ಅವರಿಗೆ ಹೆಚ್ಚಿನ ಬಣ್ಣಗಳು ದೊರೆಯಲಿಲ್ಲ ಆದರೆ ಅವರು ಸಮರೂಪಿಯಾದ ಪಟ್ಟಕವನ್ನು ಮೊದಲಿನ ಪಟ್ಟಕದ ವಿರುದ್ಧ ದಿಕ್ಕಿನಲ್ಲಿ ತಲೆಕೆಳಗಾಗಿ ಇರಿಸಿದರು. ಇದು ರೋಹಿತದ ಎಲ್ಲಾ ಬಣ್ಣಗಳು ತಲೆಕೆಳಗಾದ ಪಟ್ಟಕದ ಮೂಲಕ ಹಾದು ಹೋಗಲು ಅವಕಾಶ ಕಲ್ಪಿಸಿತು. ಎರಡನೇ ಪಟ್ಟಕದ ಮತ್ತೊಂದು ಕಡೆಯಿಂದ ನಿರ್ಗಮಿಸುವ ಬೆಳಕು ಬಿಳಿ ಬಣ್ಣದ್ದಾಗಿತ್ತು. ಈ ವೀಕ್ಷಣೆಯು ಸೂರ್ಯನ ಬೆಳಕು ಏಳು ಬಣ್ಣಗಳಿಂದ ಉಂಟಾಗಿದೆ ಎಂದು ತೀರ್ಮಾನಿಸಲು ಸುಳಿವು ನೀಡಿತು.

**11. ನಿಸರ್ಗದಲ್ಲಿ ಕಾಮನಬಿಲ್ಲು ಹೇಗೆ ಉಂಟಾಗುತ್ತದೆ ? ವಿವರಿಸಿ.**

ಉತ್ತರ:
- ವಾತಾವರಣದಲ್ಲಿರುವ ನೀರಿನ ಸಣ್ಣ ಹನಿಗಳು ಕಿರು ಪಟ್ಟಕದಂತೆ ವರ್ತಿಸುತ್ತವೆ.
- ಅವು ಸೂರ್ಯನ ಪತನ ಕಿರಣಗಳನ್ನು ವಕ್ರೀಭವನಗೊಳಿಸಿ ಚದುರಿಸುತ್ತವೆ.
- ನಂತರ ಆಂತರಿಕವಾಗಿ ಪ್ರತಿಫಲಿಸುತ್ತವೆ.
- ಅಂತಿಮವಾಗಿ ನೀರಿನ ಹನಿಗಳಿಂದ ಹೊರಬರುವಾಗ ವಕ್ರೀಭವನ ಹೊಂದುತ್ತವೆ.

ಬೆಳಕಿನ ಈ ರೀತಿಯ ವರ್ಣವಿಭಜನೆಯಿಂದ ಕಾಮನಬಿಲ್ಲು ಉಂಟಾಗುತ್ತದೆ.

**12. a. ವಾತಾವರಣದಲ್ಲಿ ಚದುರಿದ ಬೆಳಕಿನ ಬಣ್ಣವು ಯಾವ ಅಂಶವನ್ನು ಅವಲಂಬಿಸಿದೆ ?**

**b. ವಾತಾವರಣದಲ್ಲಿನ ಅತಿ ಸಣ್ಣ ಗಾತ್ರದ ಕಣಗಳು ಮತ್ತು ದೊಡ್ಡ ಗಾತ್ರದ ಕಣಗಳು ಯಾವ ಬೆಳಕನ್ನು ಚದುರಿಸುತ್ತವೆ ?**

ಉತ್ತರ: a. ಚದುರಿದ ಬೆಳಕಿನ ಬಣ್ಣವು ಚದುರಿಸುವ ಕಣಗಳ ಗಾತ್ರದ ಮೇಲೆ ಅವಲಂಬಿತವಾಗಿದೆ.

b. ಅತಿ ಸಣ್ಣ ಗಾತ್ರದ ಕಣಗಳು ಮುಖ್ಯವಾಗಿ ನೀಲಿ ಬೆಳಕನ್ನು ಚದುರಿಸಿದರೆ, ದೊಡ್ಡ ಗಾತ್ರದ ಕಣಗಳು ದೀರ್ಘ ತರಂಗಾಂತರದ ಕೆಂಪು ಬೆಳಕನ್ನು ಚದುರಿಸುತ್ತವೆ.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

## ನಿತ್ಯ ಪಂಚಾಂಗ

ಮಾಸ: ಕಾರ್ತೀಕ । ಸಂವತ್ಸರ: ಕ್ರೋಧಿ

29–11–2024 – ಶುಕ್ರವಾರ

| | |
|---|---|
| ತಿಥಿ | : ತ್ರಯೋದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಸ್ವಾತಿ |
| ಯೋಗ | : ಶೋಭನ |
| ಕರಣ | : ವಾಣಿಜ |
| ಸೂರ್ಯೋದಯ | : 06:51:28 |
| ಸೂರ್ಯಾಸ್ತ | : 17:39:11 |
| ರಾಹು ಕಾಲ | : 10:54–12:15 |
| ಯಮಘಂಡ ಕಾಲ | : 14:57–16:18 |
| ಗುಳಿಕ ಕಾಲ | : 08:12–09:33 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 28–11–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 160.06 ಅಡಿ |
| ಒಳ ಹರಿವು | 3033 ಕ್ಯುಸೆಕ್ |
| ಹೊರ ಹರಿವು | 6658 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 94.286 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1594.12 ಅಡಿ |
| ಒಳ ಹರಿವು | 495 ಕ್ಯುಸೆಕ್ |
| ಹೊರ ಹರಿವು | 6802 ಕ್ಯುಸೆಕ್ |
| ಸಾಮರ್ಥ್ಯ | 14.841 ಟಿಎಂಸಿ |


ಮಕ್ಕಳ ಜ್ಞಾನಭಂಡಾರ ಹೆಚ್ಚಳಕ್ಕೆ ಇರಲಿ ಮನೆಗೊಂದು ದಿನಪತ್ರಿಕೆ

ಪತ್ರಿಕೆ ಓದುವುದರಿಂದ ಮಕ್ಕಳಿಗಾಗುವ ಪ್ರಯೋಜನೆಗಳು

ಭಾಷಾ ಕೌಶಲ್ಯ ಸುಧಾರಣೆ
ಸಾಮಾನ್ಯ ಜ್ಞಾನ ಹೆಚ್ಚಳ
ನೈತಿಕ ಮತ್ತು ಸಾಮಾಜಿಕ ಅರಿವು
ಮೊಬೈಲಿನಿಂದ ದೂರವಿರುವುದು
ಓದುವ ಹವ್ಯಾಸಕ್ಕೆ ಅಡಿಪಾಯ

ಹೊಸಪೇಟೆಯಲ್ಲಿ ಹಂಪಿ ಟೈಮ್ಸ್ ಪತ್ರಿಕೆಗಾಗಿ ಸಂಪರ್ಕಿಸಿ
99029 09399, 99805 59681
97407 42251, 80735 89125


# ದೈಹಿಕ-ಮಾನಸಿಕ ಆರೋಗ್ಯ ವೃದ್ಧಿಗೆ ಕ್ರೀಡೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಿ

## ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ । ವಾರ್ಷಿಕ ಕ್ರೀಡಾಕೂಟಗಳಿಗೆ ಚಾಲನೆ

■ **ಹಂಪಿ ಟೈಮ್ಸ್ ಬಳ್ಳಾರಿ**

ದೈನಂದಿನ ಜೀವನದಲ್ಲಿ ವಿವಿಧ ಕ್ರೀಡೆಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳುವು ದರಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಗೊಳ್ಳುತ್ತದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಬಳ್ಳಾರಿ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಏರ್ಪಡಿಸಿದ್ದ ಮೂರು ದಿನಗಳ ವಾರ್ಷಿಕ ಕ್ರೀಡಾಕೂಟಗಳಿಗೆ ವಿದ್ಯುಕ್ತವಾಗಿ ಚಾಲನೆ ನೀಡಿ ಅವರು ಮಾತನಾಡಿದರು.

ಕ್ರೀಡೆ ಎಂಬುದು ಕೇವಲ ಆಟದ ಸಂದರ್ಭವಲ್ಲದೇ, ತಂಡ ನಿರ್ವಹಣೆ, ಪರಿಶ್ರಮ ಹಾಗೂ ಶಿಸ್ತಿನ ಕ್ರಮವಾಗಿದೆ. ಪ್ರತಿನಿತ್ಯ 30 ರಿಂದ 40 ನಿಮಿಷಗಳ ಕಾಲಕ್ರೀಡಾಚಟುವಟಿಕೆಗಳಲ್ಲಿಭಾಗವಹಿಸುವಿಕೆಯು ಉತ್ತಮ ಆರೋಗ್ಯ ರೂಪಿಸಿಕೊಳ್ಳುವ ಪ್ರಮುಖ ಆಯಾಮವಾಗಿದೆ ಎಂದರು.

ಪ್ರತಿವರ್ಷದಂತೆ ಈ ವರ್ಷವೂ ಪೊಲೀಸ್ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗೆ ಕ್ರೀಡಾಕೂಟ ಆಯೋಜನೆ ಮಾಡಿರುವುದು ಸಂತಸ ತಂದಿದೆ. ಪ್ರತಿಯೊಬ್ಬರೂ ಕ್ರೀಡಾ ಮನೋಭಾವದಿಂದ ಕ್ರೀಡಾಕೂಟದಲ್ಲಿಭಾಗವಹಿಸಿಯಶಸ್ವಿಗೊಳಿಸಬೇಕು ಎಂದು ಅವರು ಕರೆ ನೀಡಿದರು.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು




ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ಸಮಾಜದಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ಶಾಂತಿ ಕಾಪಾಡಲು ಹಗಲು–ಇರುಳು ಎನ್ನದೇ ಕರ್ತವ್ಯನಿರತರಾಗಿರುತ್ತಾರೆ. ತಮ್ಮ ಕೆಲಸಗಳ ಒತ್ತಡವನ್ನು ನಿಗ್ರಹಿಸಿಕೊಳ್ಳಲು ಕ್ರೀಡಾಕೂಟಗಳು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಪ್ರತಿಯೊಬ್ಬ ಕ್ರೀಡಾಪಟುವು ಕ್ರೀಡೆಯಲ್ಲಿ ತಮ್ಮ ಎಲ್ಲಾ ಮಾನಸಿಕ ಒತ್ತಡಗಳನ್ನು ಮರೆತು, ವಿವಿಧ ಆಟಗಳಲ್ಲಿ ಮಜ್ಞರಾಗಿ ಪಾಲ್ಗೊಳ್ಳುವ ಮೂಲಕ ಕ್ರೀಡೆಗಳಲ್ಲಿ ಉತ್ಸುಕತೆಯಿಂದ ಭಾಗವಹಿಸಬೇಕು ಎಂದು ಶುಭ ಹಾರೈಸಿದರು.



**ವಿವಿಧ ತಂಡ:**

ಪೊಲೀಸ್ ವಾರ್ಷಿಕ ಕ್ರೀಡಾಕೂಟ–2024ರಲ್ಲಿ ಪುರುಷ ಮತ್ತು ಮಹಿಳಾ ಕ್ರೀಡಾಪಟುಗಳಿಗೆ ಪ್ರತ್ಯೇಕವಾಗಿ ಕ್ರಿಕೇಟ್, ವಾಲಿಬಾಲ್, ಕಬ್ಬಡ್ಡಿ, ಟೇಬಲ್ ಟೆನ್ನಿಸ್, ಓಟ, ಉದ್ದ ಜಿಗಿತ, ಎತ್ತರ ಜಿಗಿತ, ಹಗ್ಗ ಜಗ್ಗಾಟ ಹಾಗೂ ಗುಂಡು ಹಾರಿಸುವ (ಫೈರಿಂಗ್) ಕ್ರೀಡೆಗಳನ್ನು ಆಯೋಜಿಸಿದ್ದು, ತುಂಗಾ ಡಿಎಆರ್ ತಂಡ, ಕೋಟೆ ಬಳ್ಳಾರಿ ನಗರ ತಂಡ, ದುರ್ಗಾ ಮಹಿಳಾ ತಂಡ, ವೇದಾವತಿ ಸಿರುಗುಪ್ಪ ತಂಡ, ಸ್ಕಂದಗಿರಿ ತೋರಣಗಲ್ಲು ತಂಡ, ಸಂಸ್ಕೃತಿ ಲಿಪಿಕ ಸಿಬ್ಬಂದಿ ವರ್ಗ ತಂಡ ಸೇರಿ ಆರು ತಂಡಗಳಿಂದ 120ಕ್ಕೂ ಹೆಚ್ಚಿನ ಕ್ರೀಡಾಪಟುಳು ಭಾಗವಹಿಸಿದ್ದರು.

**ಆಕರ್ಷಕ ಪಥ ಸಂಚಲನ:**

ಜಿಲ್ಲಾ ಪೊಲೀಸ್ ವಾರ್ಷಿಕ–2024 ಕ್ರೀಡಾಕೂಟ ದಲ್ಲಿ ಆರು ತಂಡಗಳ ಬಾವುಟಗಳೊಂದಿಗೆ ಕ್ರೀಡಾಪಟುಗಳ ಪಥ ಸಂಚಲನವು ಆಕರ್ಷಕ ವಾಗಿತ್ತು ಹಾಗೂ ಕ್ರೀಡಾಜ್ಯೋತಿಯೊಂದಿಗೆ ಮೈದಾನದಲ್ಲಿ ಸಂಚರಿಸಿ, ವೇದಿಕೆಯ ಮುಂಭಾಗ ತಲುಪಿ ನಿರ್ಗಮನಗೊಂಡಿತು. ಇದೇ ವೇಳೆ ಕ್ರೀಡೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ.ಶೋಭಾರಾಣಿ ವಿ.ಜೆ., ಹೆಚ್ಚುವರಿ ಪೊಲೀಸ್ ಅಧೀಕ್ಷಕ ನವೀನ್ ಕುಮಾರ್.ಎನ್ ಸೇರಿದಂತೆ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಇತರರಿದ್ದರು.


14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com


## CHANGE OF NAME

I, Nirmala G W/o late G.S.Basavaraj, Age 42 Years, R/o PF-20, HES Colony, T.B.Dam Post Office, T.B.Dam-583225, Hospet Tq, Vijayanagara Dist. Karnataka

I have Changed my son name to **G.S.Rishivardhan,** and his birthdate as 12.11.2006, his Father name as G.S.Basava Raju and his Mother name as M.Nirmala Vide affidavit sworn before Notary K.SURABHIDURGA dated on 27-11-2024, Hospet

ಜಿಲ್ಲಾ ಸಹಕಾರ ಚುನಾವಣಾ ಅಧಿಕಾರಿಗಳು ಹಾಗೂ ಸಹಕಾರಿ ಸಂಘಗಳ ಉಪ ನಿಬಂಧಕರು ಬಳ್ಳಾರಿ ಇವರ ಆದೇಶ ಸಂಖ್ಯೆ:–ಉನಿಅ: ರಿಆನೇ: ಆಮಂ: 2024–25 ದಿ:13–11–2024ರ ಮೇರೆಗೆ

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ವಿದ್ಯಾರಣ್ಯ, ಚಿತ್ತವಾಡ್ಗಿ, ತಾ: ಹೊಸಪೇಟೆ**

**ನಮೂನೆ–XII (ನಿಯಮ 14(3)ರನ್ವಯ) ಚುನಾವಣಾ ನೋಟೀಸ್**

ಇವರ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ಸಂಘದ ಕಛೇರಿಯಲ್ಲಿ ಅಂದರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ವಿದ್ಯಾರಣ್ಯ, ಚಿತ್ತವಾಡ್ಗಿ, ತಾ: ಹೊಸಪೇಟೆ ಸಂಘದ ಆವರಣದಲ್ಲಿ ದಿನಾಂಕ:15–12–2024 ಬೆಳಿಗ್ಗೆ 9–00 ಗಂಟೆಯಿಂದ ಸಾಯಂಕಾಲ 4–00 ಗಂಟೆಯವರೆಗೆ ಸಾಲಗಾರರ ಕ್ಷೇತ್ರದಿಂದ–11 ಸ್ಥಾನಗಳಿಗೆ, ಮೀಸಲಿರಿಸಿದ ಹಿಂದುಳಿದ ವರ್ಗ ಪ್ರವರ್ಗ–ಎ–01 ಸ್ಥಾನ /ಹಿಂದುಳಿದ ವರ್ಗ ಪ್ರವರ್ಗ–ಬಿ–01 ಸ್ಥಾನ / ಮಹಿಳಾ–02 ಸ್ಥಾನಗಳು / ಪರಿಶಿಷ್ಟ ಜಾತಿ–01 ಸ್ಥಾನ / ಪರಿಶಿಷ್ಟ ಪಂಗಡ–01 ಸ್ಥಾನ ಮತ್ತು ಸಾಮಾನ್ಯ –05 ಸ್ಥಾನಗಳು ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ –01 ಸ್ಥಾನ ಒಟ್ಟು 12 ಸ್ಥಾನಗಳಿಗಾಗಿ ಮೀಸಲಿಟ್ಟ ಮತಕ್ಷೇತ್ರಗಳಿಗೆ ನಡೆಸಲಾಗುವುದೆಂದು ನೋಟೀಸು ನೀಡಲಾಗಿದೆ.

ಆಕಾಂಕ್ಷಿವುಳ್ಳ ಅಭ್ಯರ್ಥಿಗಳಿಂದ ನಾಮಪತ್ರವನ್ನು ದಿನಾಂಕ: 30.11.2024 ರಿಂದ 07.12.2024, ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆವರೆಗೆ ಸ್ವೀಕರಿಸಲಾಗುವುದು. ದಿ. 08.12.2024ಂದು ನಾಮಪತ್ರಗಳ ಪರಿಶೀಲನೆ, 08.12.2024ರಂದು ಪ್ರಕಟಣೆ, 09.12.2024ರಂದು ನಾಮಪತ್ರ ಹಿಂದಕ್ಕೆ ಪಡೆಯಲು ಕೊನೆ ದಿನ, ಅದೇ ದಿನ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ. 09.12.2024ರಂದು ಚಿಹ್ನೆ ಹಂಚಿಕೆ, 11–12–2024ರಂದು ಚಿಹ್ನೆ ಸಹಿತ ಅಧಿಕೃತ ಅಭ್ಯರ್ಥಿಗಳ ಪಟ್ಟಿ ಪ್ರಕಟ. 15.12.2024ರಂದು ಬೆ.9ರಿಂದ ಸಂಜೆ 4ರವರೆಗೆ ಮತದಾನ, ನಂತರದಲ್ಲಿ ಮತ ಎಣಿಕೆ ನಂತರ ಫಲಿತಾಂಶ ಪ್ರಕಟಿಸಲಾಗುವುದು.

ದಿನಾಂಕ: 28.11.2024
ಸ್ಥಳ: ಚಿತ್ತವಾಡ್ಗಿ

**ಸಹಿ/– ರಿಟರ್ನಿಂಗ್ ಆಫೀಸರ್**
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ವಿದ್ಯಾರಣ್ಯ, ಚಿತ್ತವಾಡ್ಗಿ, ತಾ: ಹೊಸಪೇಟೆ.

# ಪದವಿ ವಿದ್ಯಾರ್ಥಿಗಳಿಗೆ ನೆರವಾದ ನರೇಗಾ

**ಮೊದಲ ಪುಟದಿಂದ**

ಯೋಜನೆಯಡಿ ಕೈಗೊಳ್ಳಲಾದ ಕಾಮಗಾರಿಯಲ್ಲಿ ಕಳೆದ ಮೂರು ವರ್ಷಗಳಿಂದ ತನ್ನ ರಜಾದಿನಗಳಲ್ಲಿ ಕೆಲಸ ಮಾಡುತ್ತಿದ್ದು, ಪಾಲಕರ ಸಹಾಯ ಪಡೆಯದೇ ತಾನೇ ದುಡಿದು ತನ್ನ ದಾಖಲಾತಿ, ಪುಸ್ತಕ ಖರೀದಿ, ಬಸ್‌ಪಾಸ್ ವ್ಯವಸ್ಥೆಗೆ ನರೇಗಾ ಕೂಲಿ ಹಣವನ್ನು ಬಳಸಿಕೊಂಡಿದ್ದಾರೆ. ಬಿಎ ತೃತೀಯ ವರ್ಷದಲ್ಲಿ ಓದುತ್ತಿರುವ ಹುಸೇನಪ್ಪ ಕೆಲಸಕ್ಕೂ ಸೈ, ಓದಿನಲ್ಲೂ ಸೈ ಎನಿಸಿಕೊಂಡಿದ್ದು, ಕೂಲಿಕಾರರ ಜೊತೆಗೂಡಿ ನರೇಗಾದಡಿ ಕೈಗೊಂಡ ನಾಲಾ ಸುಧಾರಣೆ ಕಾಮಗಾರಿ ಕೆಲಸಕ್ಕೆ ಹೋಗುವ ಮೂಲಕ ಇತರರಿಗೆ ಮಾದರಿಯಾಗಿದ್ದಾನೆ.


ಹುಸೇನಪ್ಪನ ಮನೆಯವರು ಮೂಲ ಕೃಷಿ ಕುಟುಂಬವಾಗಿದ್ದು, ಜಮೀನಲ್ಲಿ ಬೆಳೆದ ದವಸ ಧಾನ್ಯದಿಂದ ಜೀವನ ನಡೆಸುತ್ತಿದ್ದಾರೆ. ಮನೆಯಲ್ಲಿ ತಂದೆ, ತಾಯಿ, ತಮ್ಮ ಅಜ್ಜಿ ವಾಸಿಸುತ್ತಿದ್ದಾರೆ. ಸಹೋದರ ಪಿಯುಸಿ ಓದುತ್ತಿದ್ದು, ಆತನ ಶಿಕ್ಷಣಕ್ಕೂ ನರೇಗಾ ಕೂಲಿ ಹಣ ಉಪಯೋಗಿಸಲಾಗುತ್ತಿದೆ. ಇವರ ಮನೆಯಲ್ಲಿ ಮೂವರು ಕೆಲಸಕ್ಕೆ ಹೋಗುತ್ತಿದ್ದು, ಕುಟುಂಬ ನಿರ್ವಹಣೆಗೆ ಉದ್ಯೋಗ ಖಾತ್ರಿ ನೆರವಾಗಿದೆ.

ಉಪ್ಪಾರ ಹೊಸಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಹಾತ್ಮಗಾಂಧಿ ನರೇಗಾದಡಿ ಸುಮಾರು 50 ಕ್ಕೂ ಹೆಚ್ಚು ಪದವೀಧರ, ಸ್ನಾತಕೋತ್ತರ ವಿದ್ಯಾರ್ಥಿಗಳು ಪಾಲ್ಗೊಳ್ಳುತ್ತಿದ್ದಾರೆ. ರಜಾ ದಿನಗಳಲ್ಲಿ ಯೋಜನೆಯಡಿ ಕೆಲಸ ಮಾಡಿ ತಂದೆ ತಾಯಿಗೆ ಹೊರೆಯಾಗದೇ ತಮ್ಮ ವಿದ್ಯಾಭ್ಯಾಸದ ಖರ್ಚನ್ನು ತಾವೇ ಸಂಪಾದಿಸುತ್ತಾರೆ.

# ಹಂಪಿ ಭಕ್ತರ ಪರದಾಟ

**ಮೊದಲ ಪುಟದಿಂದ**

ವಿಐಪಿಗಳಿಗೆ ಮಾತ್ರ ಎನ್ನುವಂತಾಗಿರುವುದು ಭಕ್ತರಲ್ಲಿ ಬೇಸರ ಮೂಡಿಸಿದೆ. ದೇವಾಲಯ ಪ್ರವೇಶಿಸಿ ದರ್ಶನ ಪಡೆದ ನಂತರ ಪ್ರಾಂಗಾಣ ಸುತ್ತಲು ಭಕ್ತರಿಗೆ ಅವಕಾಶ ನೀಡಬೇಕು ಎಂದು ಭಕ್ತರು ಆಗ್ರಹಿಸಿದ್ದಾರೆ. ಶತಮಾನಗಳಿಂದ ಇಲ್ಲದ ನಿಯಮ ಇತ್ತೀಚೆಗೆ ಏರುತ್ತಿರುವುದು ಸ್ಮಾರಕ



ಪ್ರಿಯರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ದೂರದ ಪ್ರದೇಶಗಳಿಂದ ಬರುವ ಪ್ರವಾಸಿಗರಿಗೆ, ಭಕ್ತರಿಗೆ ದೇವಸ್ಥಾನ ಶಿಲ್ಪಕಲೆ ತಿಳಿಯದೆ ಹೋದರೆ ಭವಿಷ್ಯದಲ್ಲಿ ಹಂಪಿಗೆ ಬರವು ಸಂಖ್ಯೆಯ ಮೇಲೂ ಪರಿಣಾಮ ಬೀರಬಹುದು. ದೇವಸ್ಥಾನಗಳ ಅಭಿವೃದ್ಧಿಗೆ ಭಕ್ತರ ಕಾಣಿಕೆಯೇ ಮೂಲ ಆಧಾರವೆಂದು ತಿಳಿದಿರುವ ಸಂಬಂಧಿಸಿದ ಅಧಿಕಾರಿಗಳು ಇನ್ನಾದರು ಭಕ್ತರಿಗೆ ಶಾಂತಿ, ನೆಮ್ಮದಿಯಿಂದ ದರ್ಶನ ಪಡೆದು ತೆರಳಲು ಸೂಕ್ತ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.

# ಡ್ರೋನ್ ಆಧಾರಿತ ಫೋಟೋಗ್ರಫಿ ವಿಡಿಯೋಗ್ರಫಿ ತರಬೇತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಯಿಂದ 2024–25ನೇ ಸಾಲಿನಲ್ಲಿ ವಿಜಯನಗರ ಜಿಲ್ಲೆಯ ಮೂಲನಿವಾಸಿ ಮತ್ತು ಅಲೆಮಾರಿ, ಅರೆ ಅಲೆಮಾರಿ ಸೂಕ್ಷ್ಮ, ಅತಿ ಸೂಕ್ಷ್ಮ ಪರಿಶಿಷ್ಟ ಪಂಗಡದ ಯುವಕ, ಯುವತಿಯರಿಗೆ ಡ್ರೋನ್ ಆಧಾರಿತ ಫೋಟೋಗ್ರಫಿ ಮತ್ತು ವಿಡಿಯೋಗ್ರಫಿ ತರಬೇತಿ ನೀಡಲು ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಡಿಸೆಂಬರ್ 12 ಕೊನೆಯ ದಿನಾಂಕ ವಾಗಿದೆ.

**ಷರತ್ತುಗಳು:** ಅಭ್ಯರ್ಥಿಯು ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ರಬೇಕು, ತರಬೇತಿ ಪಡೆಯಲು ಕನಿಷ್ಠ 18 ರಿಂದ ಗರಿಷ್ಠ ಪುರುಷರಿಗೆ 35 ವರ್ಷ ಹಾಗೂ ಮಹಿಳೆಯರಿಗೆ 40 ವರ್ಷ ವಯಸ್ಸಿ ರಬೇಕು, ಅಭ್ಯರ್ಥಿಯ ಕುಟುಂಬದ ಆದಾಯ ರೂ. 2.50 ಲಕ್ಷಕಿಂತ ಹೆಚ್ಚಿರ ಬಾರದು, ತರಬೇತಿಯ ನೋಂದಣಿ ಸಮಯದಲ್ಲಿ ಕಡ್ಡಾಯವಾಗಿ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ತೇರ್ಗಡೆಗೊಂಡ ಅಂಕಪಟ್ಟಿ ಹಾಗೂ ಆಧಾರ್ ಕಾರ್ಡ್ ಸಲ್ಲಿಸಬೇಕು, ತರಬೇತಿ ನೀಡುವ ಸ್ಥಳಕ್ಕೆ ಬರುವ ಪ್ರಯಾಣ ವೆಚ್ಚ ಹಾಗೂ ತರಬೇತಿ ಅವಧಿಯಲ್ಲಿ ಯಾವುದೇ ಶಿಷ್ಯವೇತನ ನೀಡುವುದಿಲ್ಲ, ಅರ್ಜಿ ಸಲ್ಲಿಸಲು ಆಯಾ ತಾಲೂಕಿನ ಕಚೇರಿಗೆ ಭೇಟಿ ನೀಡಿ ಅರ್ಜಿ ನಮೂನೆ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ ತಾಲೂಕಿನವರು ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಹಾಗೂ ಹೂವಿನಹಡಗಲಿ ಮತ್ತು ಹಗರಿ ಬೊಮ್ಮನಹಳ್ಳಿ ತಾಲೂಕಿನವರು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಭೇಟಿ ನೀಡಬಹುದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಷಾಶು ಮೋದಿನ್ ತಿಳಿಸಿದ್ದಾರೆ.

# ಐವರು ಬಾಲಕಾರ್ಮಿಕ ಮಕ್ಕಳ ರಕ್ಷಣೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಕಾರ್ಮಿಕ ಇಲಾಖೆ ವತಿಯಿಂದ ಸಿರುಗುಪ್ಪ ಪಟ್ಟಣದ ಬಳ್ಳಾರಿ ರಸ್ತೆ, ಆದೋನಿ ರಸ್ತೆ, ಸಿಂಧನೂರು ರಸ್ತೆ, ದೇಶನೂರು ಹಾಗೂ ಪಟ್ಟಣದ ಪ್ರಮುಖ ರಸ್ತೆಗಳಲ್ಲಿನ ಮಂತಾದ ಸ್ಥಳಗಳಲ್ಲಿರುವ ಇಟ್ಟಂಗಿ ಭಟ್ಟಿ, ಗ್ಯಾರೇಜ್, ಪಂಚರ್‌ಶಾಪ್ ಕಿರಾಣಿ ಅಂಗಡಿ ಇತ್ಯಾದಿ ಉದ್ದಿಮೆಗಳ ಮೇಲೆ ಆಕಸ್ಮಿಕ ದಾಳಿ ನಡೆಸಿ ಐವರು ಬಾಲಕಾರ್ಮಿಕ ಮಕ್ಕಳನ್ನು ರಕ್ಷಿಸಲಾಗಿದೆ ಎಂದು ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾಧಿಕಾರಿ ಮೌನೇಶ್ ಅವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿಯವರ ನಿರ್ದೇಶನದ ಮೇರೆಗೆ ಹಾಗೂ PAN-India Rescue and Rehabilitation Compaign ಅಂಗವಾಗಿ ವಿವಿಧ ಇಲಾಖೆಗಳ ಜೊತೆಗೂಡಿ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ (ನಿಷೇದ ಮತ್ತು ನಿಯಂತ್ರಣ) ಕಾಯ್ದೆ 1986 ರಡಿ ನೇಮಕವಾದನಿರೀಕ್ಷಕರಟಾಸ್ಕ್‌ಫೋರ್ಸ್ ಸಮಿತಿ ಸಭೆ ನಡೆಸಿ ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ.

ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಶಾಲೆಗಳಿಗೆ ಮರು ದಾಖಲಿಸಲಾಗಿದೆ. ಟಾಸ್ಕ್‌ಫೋರ್ಸ್ ಸಮಿತಿಯಲ್ಲಿ ಸಿರುಗುಪ್ಪ ಗ್ರೇಡ್–2 ತಹಶೀಲ್ದಾರರಾದ ಸತ್ಯಮ್ಮ, ಶಿಕ್ಷಣ ಇಲಾಖೆಯ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಾದ ಗಜೇಂದ್ರ, ಕಾರ್ಮಿಕ ನಿರೀಕ್ಷಕರಾದ ರಮೇಶ್, ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮೋಹನ್ ಕಾಳಪ್ಪ, ಸಿರುಗುಪ್ಪ ನಗರಸಭೆಯ ಮೇಲ್ವಿಚಾರಕ ವೆಂಕಟೇಶ, ಸಿರುಗುಪ್ಪ ಗ್ರಾಮ ಲೆಕ್ಕಾಧಿಕಾರಿಗಳಾದ ಪರಮೇಶ್ವರಪ್ಪ, ಗಾಳಪ್ಪ, ಗೋಳಪ್ಪ ಮಕ್ಕಳ ರಕ್ಷಣಾ ಘಟಕ ಸಿಬ್ಬಂದಿ ಉಮೇಶ್, ಕಾರ್ಮಿಕ ಇಲಾಖೆ ಸಿಬ್ಬಂದಿ ಹನುಮಂತಪ್ಪ, ಚೈಲ್ಡ್‌ಲೈನ್ ಸಿಬ್ಬಂದಿ ಚಂದ್ರಕಳ ಹಾಜರಿದ್ದರು.

# ಬಾಲ್ಯವಿವಾಹ ಜಾಗೃತಿ ಮೂಡಿಸಿ

**ಮೊದಲ ಪುಟದಿಂದ**

ಇಂತಹ ಪ್ರಕರಣಗಳನ್ನು ನಿಭಾಯಿಸಿ ಮಕ್ಕಳ ಹಕ್ಕುಗಳ ರಕ್ಷಣೆ ಮಾಡುವುದು ಅತೀ ಅವಶ್ಯಕವಿದೆ. ಬಾಲ್ಯವಿವಾಹ ನಿಲ್ಲಿಸುವುದು ಮತ್ತು ಮಕ್ಕಳ ಗ್ರಾಮ ಸಭೆಗಳನ್ನು ಮಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದರು.

ಇದೇ ವೇಳೆ ನ್ಯಾಯಾಧೀಶರಾದ ರಾಜೇಶ್.ಎನ್ ಹೊಸಮನೆ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು.



ಬಳಿಕ ಬಾಲ್ಯವಿವಾಹ ನಿಷೇಧಿಸಲಾಗಿದೆ–ಎಚ್ಚರ ಎನ್ನುವ ಪೋಸ್ಟರ್ ಅನಾವರಣ ಗೊಳಿಸಿದರು. ಈಶ್ವರ್ ಎಲ್.ಪಿ.ಓ ಅವರು ಬಾಲ್ಯವಿವಾಹದಿಂದ ಸಮಾಜದಲ್ಲಿ ಆಗುವ ದುಷ್ಪರಿಣಾಮಗಳು ಮತ್ತು ಮಕ್ಕಳ ಹಕ್ಕುಗಳ ಕುರಿತು ತಿಳಿಸಿಕೊಟ್ಟರು.

ಈ ಸಂದರ್ಭದಲ್ಲಿ ಶ್ರೀಮೇಧಾ ಡಿಗ್ರಿ ಕಾಲೇಜಿನ ಪ್ರಾಚಾರ್ಯರಾದ ಮಂಜುನಾಥ್, ಮಕ್ಕಳ ಕಲ್ಯಾಣ ಸಮಿತಿ ಸದಸ್ಯರಾದ ಕಲಾವತಿ ಸೇರಿದಂತೆ ಶ್ರೀ ಮೇಧಾ ಡಿಗ್ರಿ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು.


ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ HAMPI TIMES

BOOK YOUR ADVERTISEMENTS TO REACH MORE AUIDIENCE

Classified Advertisements
Examples: Job postings, Real estate listings , Matrimonial ads, Lost and found, Services (e.g., tutors, plumbers)

Display Advertisements
Examples: Brand promotions, Product launches, Corporate announcements

Public Notices and Announcements
Examples: Tender notices, Government announcements, Legal notices, Obituaries

Recruitment Advertisements
Examples: Company job openings, Walk-in interviews, Recruitment drives

Health and Wellness Advertisements
Examples: Hospitals or clinics, Medical equipment, Health supplements

Educational Advertisements
Examples: College admissions, Coaching center promotions, Training programs

Event Advertisements
Examples: Cultural programs, Exhibitions, Concerts or festivals

Retail Advertisements
Examples: Sales or discounts, New store openings

Entertainment Advertisements
Examples: Movie releases, TV show promotions, Theater events

Political Advertisements
Campaigns or announcements related to political parties or candidates.

Real Estate Advertisements
Ads for buying, selling, or renting property.

Matrimonial Advertisements
Personal ads for seeking marriage alliances. Examples: Bride or groom profiles, Community-specific ads

Product Advertisements
Examples: Electronics, Automobiles, FMCG products

contact for more information
M: 94 48 63 30 38
Email:- hampitimes@gmail.com